ಕರ್ನಾಟಕ ಸರ್ಕಾರ

(ಸಾರ್ವಜನಿಕ ಶಿಕ್ಷಣ ಇಲಾಖೆ)

ಸಂ:ಇಡಿ:237 ಟಿಪಿಯು:95

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು ದಿನಾಂಕ:22-01-96

## ಸುತ್ತೋಲೆ

ವಿಷಯ:- ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ ನಿಯಮಗಳನ್ನು ಪಾಲಿಸದೆ ಇರುವ ನೇಮಕಾತಿಗಳಲ್ಲಿನ ರೋಸ್ಟರ್ ಉಲ್ಲಂಘನೆ ಮನ್ನಾ ಮಾಡುವ ಬಗ್ಗೆ.

oooooooooo

ಸರ್ಕಾರದ ಆದೇಶ ಸಂಖ್ಯೆ ಇಡಿ 227 ಎಸ್ಇಪಿ 94 ದಿನಾಂಕ:21- 4-95 ರಲ್ಲಿ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ದಿನಾಂಕ:1-6-92 ಕ್ಕಿಂತ ಮುಂಚಿತವಾಗಿ ನೇಮಕಾತಿ ಮಾಡಿಕೊಂಡ ಬೋಧಕ ಮತ್ತು ಬೋಧಕೇತರ ನೇಮಕಾತಿಗಳಲ್ಲಿನ ಮೀಸಲಾತಿ ಉಲ್ಲಂಘನೆಯನ್ನು ಸರ್ಕಾರವು ಕೆಲವು ಷರತ್ತುಗಳಿಗೊಳಪಡಿಸಿ ಮನ್ನಾ ಮಾಡಿದೆ. ಈ ಆದೇಶವನ್ನು ಹೊರಡಿಸಿದ ನಂತರ ದಿನಾಂಕ:1-6-92 ಕ್ಕಿಂತ ಹಿಂದೆ ನೇಮಕಾತಿ ಮಾಡಲಾಗಿದೆ ಎಂದು ತಿಳಿಸಿ ನೇಮಕಾತಿ ಅನುಮೋದನೆಗೆ ಕೆಲವು ಶಿಕ್ಷಣ ಸಂಸ್ಥೆಗಳು ಪ್ರಸ್ತಾವನೆಗಳನ್ನು ಸಲ್ಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದ್ದರಿಂದ ಇಂತಹ ಪ್ರಸ್ತಾವನೆಯನ್ನು ಪರಿಶೀಲಿಸುವಾಗ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ನೇಮಕಾತಿಗಳು ದಿನಾಂಕ:01-06-92 ಕ್ಕಿಂತ ಹಿಂದೆಯೇ ಆಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಈ ಕೆಳಕಂಡ ಅಂಶಗಳನ್ನು ಪರಿಶೀಲಿಸುವಂತೆ ಸೂಚಿಸಲಾಗಿದೆ.

1) ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಮಾಡಲಾದ ನೇಮಕಾತಿಗಳನ್ನು ಅನುಮೋದಿಸುವ ಬಗ್ಗೆ ಪ್ರಸ್ತಾವನೆಯು ಇಲಾಖೆಯ ಯಾವುದಾದರೊಂದು ಕಛೇರಿಗೆ ದಿನಾಂಕ:1-6-92 ಕ್ಕಿಂತ ಹಿಂದೆಯೇ ಬಂದಿರಬೇಕು. ಇಲ್ಲವೇ ಸದರಿ ನೇಮಕಾತಿಯು ದಿನಾಂಕ:1-6-92 ಕ್ಕಿಂತ ಹಿಂದೆಯೇ ಆಗಿದೆ ಎನ್ನುವ ಬಗ್ಗೆ ಖಚಿತ ಪುರಾವೆಗಳನ್ನು ಒದಗಿಸಿರಬೇಕು. ಆದರೆ ಸಂಬಳ ನೀಡಿದ ಬಗ್ಗೆ ಲೆಕ್ಕ ಪುಸ್ತಕದಲ್ಲಿ ತೋರಿಸಿರುವ ಖರ್ಚು ಅಥವಾ ಬ್ಯಾಂಕ್ ಮೂಲಕ ಸಂಬಳ ಪಾವತಿಯಾಗಿದ್ದಲ್ಲಿ ಅದಕ್ಕೆ ಸಂಬಂಧಿಸಿದ ದಾಖಲೆಗಳು ಆಡಿಟ್ ರಿಪೋರ್ಟನಲ್ಲಿ ಖರ್ಚಿನ ಬಗ್ಗೆ ದಾಖಲಾತಿಗಳು ಇದ್ದಲ್ಲಿ ಅವುಗಳನ್ನು ಪರಿಗಣಿಸಬಹುದು.

2) ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಕ:ಬೋಧಕೇತರ ಖಾಲಿ ಹುದ್ದೆಗೆ ನೇಮಕಾತಿ ಮಾಡಿಕೊಳ್ಳಲು ಇಲಾಖೆಯಿಂದ ದಿನಾಂಕ:1-6-92 ಕ್ಕಿಂತ ಹಿಂದೆಯೇ ಅನುಮೋದನೆ ಪಡೆದಿರಬೇಕು.

3) ಸದರಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ದಿನ ಪತ್ರಿಕೆಗಳಲ್ಲಿ ಪ್ರಕಟಣೆ ಹೊರಡಿಸಿರುವುದಕ್ಕೆ ಸಂಬಂಧಿಸಿದಂತೆ ದಿನ ಪತ್ರಿಕೆಯ ಮೂಲ ದಾಖಲಾತಿಯನ್ನು ಒದಗಿಸಿರಬೇಕು.

4) ಸದರಿ ಹುದ್ದೆಗಳ ನೇಮಕಾತಿಗೆ ನಡೆದ ಸಂದರ್ಶನದಲ್ಲಿ ಇಲಾಖೆಯ ಪ್ರತಿನಿಧಿ ಭಾಗವಹಿಸಿದ್ದ ಬಗ್ಗೆ ದೃಢೀಕೃತ ಪ್ರತಿಯನ್ನು ಒದಗಿಸಿರಬೇಕು.

ಸಹಿ
(ಆರ್ ನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ

: ನಕಲು :

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ಹೊಸ ಸಾರ್ವಜನಿಕ ಕಛೇರಿಗಳು
ಕೆ ಆರ್ ವೃತ್ತ ಬೆಂಗಳೂರು - 1

ಸಂ:ಸಿ8(4)ಶಾಶಿಅ:ನೇಮಕ:43:92-93 ದಿ:2-3-96

## ಜ್ಞಾಪನಾ

ಸರ್ಕಾರದ ಸುತ್ತೋಲೆ ಸಂ: ಇಡಿ:237 ಟಿ ಪಿ ಯು 95 ದಿನಾಂಕ:22-1-96 ರ ಪ್ರತಿಯನ್ನು ಕಳುಹಿಸುತ್ತಾ, ಸದರಿ ಸುತ್ತೋಲೆಯಲ್ಲಿ ವಿವರಿಸಿರುವಂತೆ ಎಲ್ಲಾ ಅಂಶಗಳನ್ನು ಗಮನಿಸಿ ದೃಢೀಕರಿಸಿಕೊಂಡ ನಂತರವೇ ನೇಮಕಾತಿಯನ್ನು ಅನುಮೋದಿಸಬೇಕು ಎಂದು ತಿಳಿಸಲಾಗಿದೆ. ಯಾವುದೇ ಲೋಪದೋಷಗಳಿಗೆ ಎಡೆ ನೀಡದಂತೆ ಕ್ರಮಕೈಗೊಳ್ಳಲು ತಿಳಿಸಲಾಗಿದೆ.

[illegible]
[illegible]

ನಿರ್ದೇಶಕರು
(ಪ್ರೌಢ ಶಿಕ್ಷಣ)
4/3/96

ಗೆ:
1) ರಾಜ್ಯದ ಎಲ್ಲಾ ವಿಭಾಗೀಯ ಸಹನಿರ್ದೇಶಕರುಗಳಿಗೆ
2) ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ

ಪ್ರತಿಯನ್ನು

1) ನಿರ್ದೇಶಕರು (ಪ್ರಾ ಶಿ) ಇವರ ಆಪ್ತ ಸಹಾಯಕರು
2) ಸಹನಿರ್ದೇಶಕರು (ಶಾಲಾ ಶಿಕ್ಷಣ) ಇವರ ಆಪ್ತ ಸಹಾಯಕರು
3) ಉಪನಿರ್ದೇಶಕರು (ಪ್ರಾಥಮಿಕ ಶಿಕ್ಷಣ)([illegible])
4) ಅಧೀಕ್ಷಕರು (ಸಿಬ್ಬಂದಿ 8)
5) ಸಿಬ್ಬಂದಿ 8 ವಿಭಾಗದ ಎಲ್ಲಾ ಕಾರ್ಯನಿರ್ವಾಹಕರಿಗೆ
6) ಕಛೇರಿ ಪ್ರತಿ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ :– ಭಾರತದ ಸಂವಿಧಾನದ 16(4)ನೇ ಪರಿಚ್ಛೇದದಂತೆ ರಾಜ್ಯದ ಸೇವಾ ಸಿಬ್ಬಂದಿಯ ನೇಮಕಾತಿ ಮತ್ತು ಹುದ್ದೆಗಳಲ್ಲಿ ಮೀಸಲಾತಿ ಸೌಲಭ್ಯ ನೀಡುವುದಕ್ಕಾಗಿ ಹಿಂದುಳಿದವರ ವರ್ಗೀಕರಣ.

ಓದಲಾಗಿದೆ:–

(1) ಆದೇಶ ಸಂಖ್ಯೆ ಡಿಪಿಎಆರ್ 1 ಎಸ್‌ಬಿಸಿ 77 ದಿನಾಂಕ 4ನೇ ಮಾರ್ಚ್ 1977

(2) ಆದೇಶ ಸಂಖ್ಯೆ ಎಸ್‌ಡಬ್ಲ್ಯೂಎಲ್ 66 ಬಿಸಿಎ 86 ದಿನಾಂಕ 13ನೇ ಅಕ್ಟೋಬರ್ 1986

(3) ಆದೇಶ ಸಂಖ್ಯೆ ಎಸ್‌ಡಬ್ಲ್ಯೂಎಲ್ 66 ಬಿಸಿಎ 86 ದಿನಾಂಕ 19ನೇ ನವೆಂಬರ್ 1986

ಪ್ರಸ್ತಾವನೆ :–

ಕ್ರಮ ಸಂಖ್ಯೆ (1)ರಲ್ಲಿ ಮೇಲೆ ಓದಲಾಗಿರುವ ದಿನಾಂಕ 4ನೇ ಮಾರ್ಚ್ 1977ರ ಆದೇಶದಲ್ಲಿ ಪ್ರಥಮ ಹಿಂದುಳಿದ ವರ್ಗಗಳ ಆಯೋಗದ ಶಿಫಾರಸ್ಸಿನ ಮೇರೆಗೆ ಪರಿಶಿಷ್ಟ ಜಾತಿ ಪರಿಶಿಷ್ಟ ಬುಡಕಟ್ಟು ಮತ್ತು ಇತರ ಹಿಂದುಳಿದ ವರ್ಗಗಳ ನಾಗರಿಕರಿಗೆ ಭಾರತದ ಸಂವಿಧಾನದ 16 (4) ನೇ ಪರಿಚ್ಛೇದದ ಪರಿಮಿತಿಯಲ್ಲಿ ರಾಜ್ಯದ ಸೇವಾ ಸಿಬ್ಬಂದಿಯಲ್ಲಿ ಕೊಡಬೇಕಾದ ಮೀಸಲಾತಿಯ ಪ್ರಮಾಣವನ್ನು ನಿಗದಿಪಡಿಸಿದ ಆದೇಶ ಹೊರಡಿಸಲಾಗಿತ್ತು. ಈ ಆದೇಶವು ಕಾಲಕಾಲಕ್ಕೆ ಪರಿಷ್ಕರಿಸಲಾಯಿತು.

2. ಕ್ರಮ ಸಂಖ್ಯೆ (2)ರಲ್ಲಿ ಮತ್ತು (3)ರಲ್ಲಿ ಮೇಲೆ ಓದಲಾದ ದಿನಾಂಕ 13–10–1986ರ ಮತ್ತು 19–11–1986ರ ಆದೇಶದಲ್ಲಿ ರಾಜ್ಯದ ಸೇವಾ ಸಿಬ್ಬಂದಿಯಲ್ಲಿ ಭಾರತದ ಸಂವಿಧಾನದ 16 (4)ನೇ ಪರಿಚ್ಛೇದದ ಮೇರೆಗೆ ಮೀಸಲಾತಿ ಸೌಲಭ್ಯ ಸಾಕಷ್ಟು ಪ್ರಮಾಣದಲ್ಲಿ ದೊರಕದಿರುವ ಹಿಂದುಳಿದ ಜನರ ಪುನರ್‌ವರ್ಗೀಕರಣ ಮಾಡಲಾಗಿದೆ. ಆ ಆದೇಶದಲ್ಲಿ ಪುನರ್ ನಿಗದಿಪಡಿಸಿದ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಪ್ರಮಾಣವನ್ನು ನಿಗದಿಪಡಿಸಲಾಗಿದೆ.

ಸರ್ಕಾರೀ ಆದೇಶ ಸಂಖ್ಯೆ ಡಿಪಿಎಆರ್ 28 ಎಸ್‌ಬಿಸಿ 86,
ಬೆಂಗಳೂರು ದಿನಾಂಕ 12ನೇ ಡಿಸೆಂಬರ್ 1986

ದಿನಾಂಕ 13–10–1986ರ ಮತ್ತು 19–11–1986ರ ಆದೇಶದಲ್ಲಿ ಪುನರ್ವರ್ಗೀಕರಿಸಲ್ಪಟ್ಟ ಹಿಂದುಳಿದ ವರ್ಗಗಳಿಗಾಗಿ ಪುನರ್ ನಿಗದಿಪಡಿಸಿದಷ್ಟು ಮೀಸಲಾತಿ ಸೌಲಭ್ಯ ಜಾರಿಗೊಳಿಸುವುದಕ್ಕಾಗಿ ಮತ್ತು ಕ್ರಮಸಂಖ್ಯೆ (1)ರಲ್ಲಿ ಓದಿರುವ ಆದೇಶವನ್ನು ರದ್ದುಗೊಳಿಸಿ ಕೆಳಕಂಡಂತೆ ಆದೇಶ ಹೊರಡಿಸಿದೆ.

2. ಈ ಆದೇಶದಲ್ಲಿ ಹಾಗೂ ಇದರ ಅನುಬಂಧಗಳಲ್ಲಿ ಹಿಂದುಳಿದ ವರ್ಗಗಳ ಗ್ರೂಪ್ 'ಎ' ಗ್ರೂಪ್ 'ಬಿ' ಗ್ರೂಪ್ 'ಸಿ' ಗ್ರೂಪ್ 'ಡಿ' ಮತ್ತು ಗ್ರೂಪ್ 'ಇ'ಎಂಬ ಶಬ್ದ ಪ್ರಯೋಗವು ಸರ್ಕಾರಿ ಆದೇಶ ಸಂಖ್ಯೆ ಎಸ್‌ಡಬ್ಲ್ಯೂಎಲ್ 66 ಬಿಸಿಎ 86 ...



ಅನುಬಂಧ 2ರಲ್ಲಿರುವ ಅರ್ಥವನ್ನೇ ಹೊಂದಿರುತ್ತದೆ ಈ ಆದೇಶದ ಅನ್ವಯ ಮೀಸಲಾತಿ ಕೋರುವ ಹಿಂದುಳಿದ ಪ್ರವರ್ಗದ ಗ್ರೂಪ್–ಎ, ಗ್ರೂಪ್–ಬಿ, ಗ್ರೂಪ್–ಸಿ, ಗ್ರೂಪ್–ಡಿ, ಮತ್ತು ಗ್ರೂಪ್–ಇ ಅಭ್ಯರ್ಥಿಗಳು ತಾವು ಮತ್ತು ತಮ್ಮ ತಂದೆ ತಾಯಿ ಅಥವಾ ಪೋಷಕರು ಸಾಮಾನ್ಯವಾಗಿ ಕರ್ನಾಟಕ ರಾಜ್ಯದಲ್ಲಿಯೇ ವಾಸಿಸುವುದಾಗಿ ಅನುಬಂಧ–3 ರಲ್ಲಿರುವ ಸಂಬಂಧಿಸಿದ ಘೋಷಣಾ ಪತ್ರದಲ್ಲಿ ಘೋಷಿಸಬೇಕು.

ಸೂಚನೆ :– ಸಾಮಾನ್ಯವಾಗಿ ವಾಸಿಸುವ ಎಂಬ ಪದದ ಅರ್ಥವು, ಪ್ರಜಾ ಪ್ರಾತಿನಿಧ್ಯತೆ ಕಾಯ್ದೆ, 1950ರ 20ನೇ ಕಲಮಿನಲ್ಲಿರುವ 'ಸಾಮಾನ್ಯವಾಗಿ ವಾಸಿಸುವ' ಎಂಬ ಪದದ ಅರ್ಥವನ್ನೇ ಹೊಂದಿರುತ್ತದೆ.

3. ದಿನಾಂಕ 13–10–1986ರ ಆದೇಶದಲ್ಲಿ ಹೇಳಿದಷ್ಟು ಶೇಕಡಾ ಪ್ರಮಾಣದಲ್ಲಿ ಮೀಸಲಾತಿಯನ್ನು ಪ್ರತಿ ನೇಮಕಾತಿ ಪ್ರಾಧಿಕಾರದಡಿಯಲ್ಲಿರುವ ಹುದ್ದೆಗಳ ಪ್ರತಿ ಪ್ರವರ್ಗದ ನೇರ ಆಯ್ಕೆಯಲ್ಲಿಯೂ ಮಾಡತಕ್ಕದ್ದು. ಹಿಂದುಳಿದ ಜನರ ಒಂದೊಂದು ಪ್ರವರ್ಗಕ್ಕೂ ಮೀಸಲಿಡಬೇಕಾದ ರಿಕ್ತ ಸ್ಥಾನಗಳ ಸಂಖ್ಯಾಬಲ ಕಂಡುಹಿಡಿಯುವುದಕ್ಕಾಗಿ ಒಂದು ನೂರು ರಿಕ್ತ ಸ್ಥಾನಗಳ ರೋಸ್ಟರ್ ಅನುಸರಿಸತಕ್ಕದ್ದು. ಈ ರೋಸ್ಟರನ್ನು ಪ್ರತಿ ನೇಮಕಾತಿ ಪ್ರಾಧಿಕಾರದಡಿಯಲ್ಲಿರುವ ಹುದ್ದೆಗಳ ಪ್ರತಿ ಪ್ರವರ್ಗಕ್ಕೂ ಪ್ರತ್ಯೇಕವಾಗಿ ಮತ್ತು ಕ್ರಮ ಸಂಖ್ಯೆ ಒಂದರಿಂದ ಪ್ರಾರಂಭಿಸಿ ಅನುಸರಿಸಬೇಕು. ರಿಕ್ತ ಸ್ಥಾನಗಳ ರೋಸ್ಟರ್ ಈ ಆದೇಶಕ್ಕೆ ಲಗತ್ತಿಸಿದ ಅನುಬಂಧ–1ರಂತೆ ಇರಬೇಕು. ಒಂದು ನೂರನೆಯ ರಿಕ್ತ ಸ್ಥಾನ ತುಂಬುವವರೆಗೂ ಮುಂದುವರಿಯುವಂತೆ ರೋಸ್ಟರ್ ಉಪಯೋಗಿಸಲ್ಪಡತಕ್ಕದ್ದು. ಉದಾಹರಣೆಗಾಗಿ ಪ್ರಪ್ರಥಮ ಆಯ್ಕೆಯ ಸಮಯದಲ್ಲಿ 21 ರಿಕ್ತ ಸ್ಥಾನಗಳನ್ನು ತುಂಬಿದಲ್ಲಿ ಎರಡನೆಯ ಸಲ ಆಯ್ಕೆ ಮಾಡುವಾಗ ರಿಕ್ತ ಸ್ಥಾನಗಳ ವರ್ಗೀಕರಣವನ್ನು 22ನೇ ಕ್ರಮ ಸಂಖ್ಯೆಯಿಂದ ಪ್ರಾರಂಭಿಸಬೇಕು. ಇದೇ ವಿಧಾನವನ್ನು ಮುಂದಿನ ಆಯ್ಕೆಯ ಸಮಯದಲ್ಲೂ (ಒಟ್ಟು 100 ರಿಕ್ತ ಸ್ಥಾನಗಳನ್ನು ತುಂಬುವವರೆಗೆ) ಮುಂದುವರಿಸಬೇಕು. ಒಟ್ಟು 100 ಸ್ಥಾನಗಳನ್ನು ತುಂಬಿದ ಬಳಿಕ ಪುನಃ ಕ್ರಮಸಂಖ್ಯೆ ಒಂದರಿಂದ ಪ್ರಾರಂಭಿಸಬೇಕು.

4 ನೇಮಕಾತಿ ನಿಯಮಗಳ ಪ್ರಕಾರ ಆಯ್ಕೆ ಪ್ರಾಧಿಕಾರ ಒಂದೇ ಪ್ರವರ್ಗದಲ್ಲಿರುವ ಹುದ್ದೆಗಳನ್ನು ತುಂಬಲು ಮುಖ್ಯಪಟ್ಟಿ ಮತ್ತು 'ಹೆಚ್ಚಿನ ಪಟ್ಟಿ' ಹೀಗೆ ಎರಡು ಆಯ್ಕೆ ಪಟ್ಟಿಗಳನ್ನು ತಯಾರಿಸಬೇಕಾದಲ್ಲಿ, ನೇಮಕಾತಿ ಪ್ರಾಧಿಕಾರವು, ಆ ಎರಡು ಪಟ್ಟಿಗಳಲ್ಲಿ ಒಂದೊಂದಕ್ಕೂ ಅನ್ವಯಿಸಿದಂತೆ ಪ್ರತ್ಯೇಕ ರೋಸ್ಟರುಗಳನ್ನು ಇಡಬೇಕು. ಆಯಾ ರೋಸ್ಟರುಗಳ ಪ್ರಕಾರವೇ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಸಲ್ಲಬೇಕಾದ ರಿಕ್ತ ಸ್ಥಾನಗಳ ಸಂಖ್ಯೆಯನ್ನು ನಿಗದಿಪಡಿಸಿ ಪ್ರತಿಯೊಂದು ಮೀಸಲಾತಿ ವರ್ಗದವರನ್ನೂ ಮುಖ್ಯ ಪಟ್ಟಿಯಲ್ಲಿ ಮತ್ತು ಹೆಚ್ಚಿನ ಪಟ್ಟಿಯಲ್ಲಿ ಎಷ್ಟೆಷ್ಟು ಆಯ್ಕೆ ಮಾಡಬೇಕೆಂಬುದನ್ನು ಆಯ್ಕೆ ಪ್ರಾಧಿಕಾರಕ್ಕೆ ಸ್ಪಷ್ಟವಾಗಿ

5. ಪ್ರಕಟಿಸಿದಷ್ಟು ರಿಕ್ತ ಸ್ಥಾನಗಳಿಗಿಂತ ಕಡಿಮೆ ಸಂಖ್ಯೆಯಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕಾದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗದವರಿಗೆ ಸಲ್ಲಬೇಕಾದ ಮೀಸಲಾತಿಯನ್ನು ಪ್ರಕಟಿಸಿದ ರಿಕ್ತ ಸ್ಥಾನಗಳ ಸಂಖ್ಯೆಯ ಬದಲಾಗಿ ಆಯ್ಕೆ ಮಾಡಲ್ಪಟ್ಟ ಅಭ್ಯರ್ಥಿಗಳ ಸಂಖ್ಯೆಗನುಗುಣವಾಗಿ ನಿಗದಿಪಡಿಸಬೇಕು.

6. ನೇರ ನೇಮಕಾತಿಗಾಗಿ ಯಾವುದೇ ಪ್ರವರ್ಗದ ಹುದ್ದೆಗಳ ರಿಕ್ತ ಸ್ಥಾನಗಳನ್ನು ಆಯ್ಕೆ ಪ್ರಾಧಿಕಾರಿಗಳಿಗೆ ತಿಳಿಸುವ ಪ್ರತಿ ಸಮಯದಲ್ಲೂ, ಪರಿಶಿಷ್ಟ ಜಾತಿಗೆ ಸೇರಿದವರು ಅದೇ ಪ್ರವರ್ಗದ ಹುದ್ದೆಗಳಲ್ಲಿ ಕನಿಷ್ಠ ಶೇಕಡಾ 15 ರಷ್ಟು ಇರುವರೇ ಎಂಬುದನ್ನು ನೇಮಕಾತಿ ಪ್ರಾಧಿಕಾರವು ಪರಿಶೀಲಿಸಬೇಕು. ಅವರು ಕನಿಷ್ಠ ಶೇಕಡಾ 15 ರಷ್ಟು ಇರದಿದ್ದಲ್ಲಿ ಅವರಿಗಾಗಿ ಪ್ರಸ್ತುತ ಮತ್ತು ಮುಂಬರುವ ಆಯ್ಕೆಗಳಲ್ಲಿ ಮೀಸಲಾತಿಯ ಶೇಕಡಾ ಪ್ರಮಾಣವನ್ನು ನೇಮಕಾತಿ ಪ್ರಾಧಿಕಾರವು 20ಕ್ಕೆ ಏರಿಸಬೇಕು. ಈ ರೀತಿ ಹೆಚ್ಚಿಸಿದ ಪ್ರಮಾಣವನ್ನು ಜಾರಿಗೊಳಿಸುವುದಕ್ಕಾಗಿ ರೋಸ್ಟರ್‌ನಲ್ಲಿ (ಅನುಬಂಧ-1)ಕ್ರಮ ಸಂಖ್ಯೆ 17,38,59,80, ಮತ್ತು 91 ಇವುಗಳನ್ನೂ ಸಹ ಪರಿಶಿಷ್ಟ ಜಾತಿಯವರಿಗಾಗಿ ಕೊಡಬೇಕು. ಯಾವುದೇ ಪ್ರವರ್ಗದಲ್ಲಿರುವ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿಯವರ ಶೇಕಡಾ ಪ್ರಮಾಣ 15ಕ್ಕೆ ಮುಟ್ಟುವವರೆಗೆ ಮಾತ್ರ ಅವರಿಗಾಗಿ ಮುಂಬರುವ ಆಯ್ಕೆಗಳಲ್ಲಿ ಮೀಸಲಾತಿ ಪ್ರಮಾಣವನ್ನು ಶೇಕಡಾ 20ಕ್ಕೆ ಏರಿಸಬೇಕಾಗಿರುವುದರಿಂದ ಮೇಲೆ ಹೇಳಿದ ಹೆಚ್ಚಿನ ಐದು ರಿಕ್ತ ಸ್ಥಾನಗಳಲ್ಲಿ ಅವಶ್ಯಕತೆ ಇರುವಷ್ಟು ಮಾತ್ರ ಅವರಿಗಾಗಿ ಬಿಟ್ಟು ಕೊಡಬೇಕು. ಅಂದರೆ ಇನ್ನು ಮುಂದಿನ ಯಾವುದೇ ಆಯ್ಕೆ ಸಮಯದಲ್ಲಿ ಅನುಬಂಧ 1ರ ಕ್ರಮ ಸಂಖ್ಯೆ 17,38 ಮತ್ತು 59ರಲ್ಲಿರುವ ಹೆಚ್ಚಿನ ರಿಕ್ತ ಸ್ಥಾನಗಳನ್ನು ಪರಿಶಿಷ್ಟ ಜಾತಿಯವರಿಗೆ ಬಿಟ್ಟುಕೊಟ್ಟ ಬಳಿಕ ಅವರ ಸಂಖ್ಯಾ ಪ್ರಮಾಣ ಶೇಕಡಾ 15ರಷ್ಟು ಮುಟ್ಟಿದರೆ 80 ಮತ್ತು 91ರಲ್ಲಿರುವ ರಿಕ್ತ ಸ್ಥಾನಗಳನ್ನು ಅವರಿಗಾಗಿ ಬಿಟ್ಟು ಕೊಡಬೇಕಿಲ್ಲ. ಆ ಎರಡು ರಿಕ್ತ ಸ್ಥಾನಗಳನ್ನು ಸಾಮಾನ್ಯ ಅರ್ಹತೆಯವರಿಗಾಗಿಯೇ ಇಡಬೇಕು.

7. ನೇರ ನೇಮಕಾತಿಗಾಗಿ ಯಾವುದೇ ಪ್ರವರ್ಗದ ಹುದ್ದೆಗಳ ರಿಕ್ತ ಸ್ಥಾನಗಳನ್ನು ಆಯ್ಕೆ ಪ್ರಾಧಿಕಾರಗಳಿಗೆ ತಿಳಿಸುವ ಪ್ರತಿ ಸಮಯದಲ್ಲೂ ಪರಿಶಿಷ್ಟ ಪಂಗಡಕ್ಕೆ ಸೇರಿದವರು ಅದೇ ಪ್ರವರ್ಗದ ಹುದ್ದೆಗಳಲ್ಲಿ ಕನಿಷ್ಠ ಶೇಕಡಾ 3ರಷ್ಟು ಇರುವರೇ ಎಂಬುದನ್ನು ನೇಮಕಾತಿ ಪ್ರಾಧಿಕಾರವು ಪರಿಶೀಲಿಸಬೇಕು. ಅವರು ಕನಿಷ್ಠ ಸೇಕಡಾ 3ರಷ್ಟು ಇರದಿದ್ದಲ್ಲಿ ಅವರಿಗಾಗಿ ಪ್ರಸ್ತುತ ಮುಂಬರುವ ಆಯ್ಕೆಗಳಲ್ಲಿ ಮೀಸಲಾತಿಯ ಶೇಕಡಾ ಪ್ರಮಾಣವನ್ನು ನೇಮಕಾತಿ ಪ್ರಾಧಿಕಾರವೇ 5ಕ್ಕೆ ಏರಿಸಬೇಕು. ಈ ರೀತಿ ಹೆಚ್ಚಿಸಿದ ಪ್ರಮಾಣವನ್ನು ಜಾರಿಗೊಳಿಸುವುದಕ್ಕಾಗಿ ರೋಸ್ಟರ್‌ನಲ್ಲಿ ಅನುಬಂಧ-I ರ ಕ್ರಮ ಸಂಖ್ಯೆ 49 ಮತ್ತು 85 ಇವುಗಳನ್ನು ಸಹ ಪರಿಶಿಷ್ಟ ಪಂಗಡದವರಿಗಾಗಿ ಕೊಡಬೇಕು. ಯಾವುದೇ



ಮೇಲೆ ಹೇಳಿದ ಹೆಚ್ಚಿನ ಎರಡು ರಿಕ್ತ ಸ್ಥಾನಗಳಲ್ಲಿ ಅವಶ್ಯಕತೆ ಇರುವಷ್ಟು ಮಾತ್ರ ಅವರಿಗಾಗಿ ಬಿಟ್ಟು ಕೊಡಬೇಕು. ಅಂದರೆ ಇನ್ನು ಮುಂದಿನ ಯಾವುದೇ ಆಯ್ಕೆ ಸಮಯದಲ್ಲಿ ಅನುಬಂಧ-1ರ ಕ್ರಮ ಸಂಖ್ಯೆ 49ರಲ್ಲಿರುವ ಹೆಚ್ಚಿನ ರಿಕ್ತ ಸ್ಥಾನವನ್ನು ಪರಿಶಿಷ್ಟ ಪಂಗಡದವರಿಗೆ ಬಿಟ್ಟು ಕೊಟ್ಟ ಬಳಿಕ ಅವರ ಸಂಖ್ಯಾ ಪ್ರಮಾಣ ಶೇಕಡಾ 3ರಷ್ಟು ಮುಟ್ಟಿದರೆ 85ನೇ ಕ್ರಮ ಸಂಖ್ಯೆಯ ರಿಕ್ತ ಸ್ಥಾನವನ್ನು ಅವರಿಗಾಗಿ ಬಿಟ್ಟು ಕೊಡಬೇಕಿಲ್ಲ. ಆ ಸ್ಥಾನವನ್ನು ಸಾಮಾನ್ಯ ಅರ್ಹತೆಯವರಿಗಾಗಿಯೇ ಇರಬೇಕು.

8. ಈ ಆದೇಶದಲ್ಲಿ ಆದೇಶಿಸಿರುವ ಮೀಸಲಾತಿಯನ್ನು ಸರಿಯಾಗಿ ಜಾರಿಗೊಳಿಸಲು ಅನುವಾಗುವಂತೆ ಅನುಸರಿಸಬೇಕಾದ ಆಯ್ಕೆ ವಿಧಾನವು ಅನುಬಂಧ-2ರಲ್ಲಿದೆ. ಈ ವಿಧಾನವನ್ನು ಲೋಕ ಸೇವಾ ಆಯೋಗ ಮತ್ತಿತರ ಆಯ್ಕೆ ಪ್ರಾಧಿಕಾರಗಳು ಚಾಚೂ ತಪ್ಪದೆ ಅನುಸರಿಸಬೇಕು.

9. ಯಾವುದೇ ಪ್ರವರ್ಗದ ಹುದ್ದೆಗಳಿಗೆ ಅಥವಾ ಸೇವೆಗಳಿಗೆ ಒಂದು ಕ್ಯಾಲೆಂಡರ್ ವರ್ಷದಲ್ಲಿ ಮಾಡುವ ಆಯ್ಕೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಥವಾ ಇತರ ಹಿಂದುಳಿದ ವರ್ಗಗಳಿಗೆ ಮೀಸಲಿಟ್ಟ ರಿಕ್ತ ಸ್ಥಾನಗಳನ್ನು ತುಂಬುವುದಕ್ಕಾಗಿ ಆಯಾ ಜಾತಿ ಪಂಗಡ ವರ್ಗಗಳಿಗೆ ಸೇರಿದವರು ದೊರಕದಿದ್ದಲ್ಲಿ ಆ ರಿಕ್ತ ಸ್ಥಾನಗಳನ್ನು ಈ ರೀತಿ ಇತರ ಮೀಸಲಾತಿ ವರ್ಗ ಅಥವಾ ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ತುಂಬತಕ್ಕದ್ದು ; ಹೇಗೆಂದರೆ.

(i) ಪರಿಶಿಷ್ಟ ಜಾತಿಯ ಅಭ್ಯರ್ಥಿಗಳ ಕೊರತೆಯಿಂದ ತುಂಬಲಾಗದ ರಿಕ್ತ ಸ್ಥಾನಗಳನ್ನು ಪರಿಶಿಷ್ಟ ಪಂಗಡದವರಿಗೆ ಕೊಡಬೇಕು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಹ ಅಭ್ಯರ್ಥಿಗಳೂ ದೊರಕದೆ ಉಳಿದುಹೋದ ರಿಕ್ತ ಸ್ಥಾನಗಳನ್ನು ಸಾಧ್ಯವಾದ ಮಟ್ಟಿಗೆ 'ಗ್ರೂಪ್ ಬಿ' 'ಗ್ರೂಪ್ ಸಿ' ಮತ್ತು 'ಗ್ರೂಪ್ ಡಿ' ಪ್ರವರ್ಗದ ಹಿಂದುಳಿದ ವರ್ಗಗಳವರಿಗೆ ಅನುಕ್ರಮವಾಗಿ 1:1:1 ಪ್ರಮಾಣದಲ್ಲಿ ಕೊಡಬೇಕು.

(ii) ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಕೊರತೆಯಿಂದ ತುಂಬಲಾಗದ ರಿಕ್ತ ಸ್ಥಾನಗಳನ್ನು ಪರಿಶಿಷ್ಟ ಜಾತಿಯವರಿಗೆ ಕೊಡಬೇಕು. ಪರಿಶಿಷ್ಟ ಜಾತಿಗೆ ಸೇರಿದ ಅರ್ಹ ಅಭ್ಯರ್ಥಿಗಳೂ ದೊರಕದೆ ಉಳಿದುಹೋದ ರಿಕ್ತ ಸ್ಥಾನಗಳನ್ನು ಸಾಧ್ಯವಾದ ಮಟ್ಟಿಗೆ 'ಗ್ರೂಪ್ ಎ' ಪ್ರವರ್ಗಕ್ಕೆ ಸೇರಿದವರಿಗೆ ಕೊಡಬೇಕು.

(iii) 'ಗ್ರೂಪ್ ಎ' 'ಗ್ರೂಪ್ ಬಿ' 'ಗ್ರೂಪ್ ಸಿ' 'ಗ್ರೂಪ್ ಡಿ' ಮತ್ತು 'ಗ್ರೂಪ್ ಇ' ಪ್ರವರ್ಗಗಳಿಗೆ ಸೇರಿದ ಹಿಂದುಳಿದ ವರ್ಗಗಳಿಗೆ ಮೀಸಲಿಟ್ಟ ರಿಕ್ತ ಸ್ಥಾನಗಳನ್ನು ತುಂಬಲು ಆಯಾ ಪ್ರವರ್ಗದ ಅಭ್ಯರ್ಥಿಗಳು ದೊರಕದಿದ್ದಲ್ಲಿ ಆ ಎಲ್ಲ ರಿಕ್ತ ... ಮೇಲೆ (i) ಹಾಗೂ (ii) ರಲ್ಲಿ ಕಾಣಿಸಿದಂತೆ

ಮೇಲೆ ಹೇಳಿದ ಮೂರು ಸನ್ನಿವೇಶಗಳಲ್ಲೂ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ಗ್ರೂಪ್ 'ಎ' ಗ್ರೂಪ್ 'ಬಿ' ಗ್ರೂಪ್ 'ಸಿ' ಗ್ರೂಪ್ 'ಡಿ' ಹಾಗೂ ಗ್ರೂಪ್ 'ಇ' ಪ್ರವರ್ಗಗಳಿಗೆ ಸೇರಿದ ಅಭ್ಯರ್ಥಿಗಳ ಕೊರತೆಯಿಂದ ತುಂಬಲ್ಪಡದ ರಿಕ್ತ ಸ್ಥಾನಗಳನ್ನು ಅದೇ ಕ್ಯಾಲೆಂಡರ್ ವರ್ಷದಲ್ಲಿ ಮಾಡುವ ಮುಂದಿನ ಆಯ್ಕೆಗೆ ಮತ್ತು ಎರಡು ಕ್ಯಾಲೆಂಡರ್ ವರ್ಷಗಳಲ್ಲಿ ಅದೇ ಪ್ರವರ್ಗದ ಹುದ್ದೆಗಳಿಗೆ ಮಾಡುವ ಆಯ್ಕೆಗಳಿಗೆ ಆಯಾ ಮೀಸಲಾತಿ ವರ್ಗದವರ ಪರವಾಗಿ ಕೊಂಡೊಯ್ಯಬೇಕು.

10. ಅದೇ ಪ್ರವರ್ಗದ ಹುದ್ದೆಗಳಿಗೆ ಅದೇ ಕ್ಯಾಲೆಂಡರ್ ವರ್ಷದಲ್ಲಿ ಅಥವಾ ಮುಂದಿನ ಎರಡು ಕ್ಯಾಲೆಂಡರ್ ವರ್ಷಗಳಲ್ಲಿ ಮಾಡಬೇಕಾದ ಮುಂದಿನ ಆಯ್ಕೆಗಳಲ್ಲಿ ಸಹ ರಿಕ್ತ ಸ್ಥಾನಗಳಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗದವರಿಗೆ ಈ ಆದೇಶದಲ್ಲಿ ಹಾಕಿಕೊಟ್ಟ ಪ್ರಮಾಣ ಮತ್ತು ಮಾದರಿಯಲ್ಲಿಯೇ ಮೀಸಲಾತಿ ಸೌಲಭ್ಯ ನೀಡಬೇಕು. ಆದರೆ ಹಿಂದಿನ ಸಲ ಮಾಡಿದ ಆಯ್ಕೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗದ ಅಭ್ಯರ್ಥಿಗಳ ಕೊರತೆಯಿಂದಾಗಿ ತುಂಬಲಾಗದ 9ನೇ ಕಂಡಿಕೆಯಂತೆ ಕೊಂಡೊಯ್ಯಲಾದಷ್ಟು ರಿಕ್ತ ಸ್ಥಾನಗಳನ್ನು ಮುಂದಿನ ಸಲ ಮಾಡುವ ಆಯ್ಕೆಯಲ್ಲಿ ಆಯಾ ಜಾತಿಗಳು ಪಂಗಡಗಳು, ಇತರ ಹಿಂದುಳಿದ ಪ್ರವರ್ಗಗಳಿಗೆ ಹೆಚ್ಚಾಗಿ ಕೊಡಬೇಕು. ಹಾಗೆ ಮಾಡುವ ಉದ್ದೇಶಕ್ಕಾಗಿ ಹಿಂದಿನ ಸಲ ಕೊಂಡೊಯ್ಯಲಾದ ರಿಕ್ತ ಸ್ಥಾನಗಳನ್ನು 9ನೇ ಕಂಡಿಕೆಯಂತೆ ಯಾರಿಗೆ ಕೊಡಲಾಗಿತ್ತೋ ಅವರಿಗೆ ಸಲ್ಲುವ ರಿಕ್ತ ಸ್ಥಾನಗಳಲ್ಲಿ ಅಷ್ಟೇ ಪ್ರಮಾಣದಲ್ಲಿ ಕಡಿಮೆ ಮಾಡಬೇಕು.

11. ಒಂಬತ್ತನೇ ಕಂಡಿಕೆಯಲ್ಲಿ ಹೇಳಿರುವಂತೆ ಮೀಸಲಾತಿ ಪ್ರವರ್ಗಗಳಿಗೆ ಸೇರಿದ ಅಭ್ಯರ್ಥಿಗಳ ಕೊರತೆಯಿಂದಾಗಿ ತುಂಬಲಾಗದಿದ್ದ ರಿಕ್ತ ಸ್ಥಾನಗಳನ್ನು ಕೊಂಡೊಯ್ಯುವ ಮತ್ತು ಆ ಪ್ರವರ್ಗಗಳಿಗಾಗಿ ನಷ್ಟವನ್ನು ಮುಂದಿನ ಸಲ ಮಾಡುವ ಆಯ್ಕೆಯಲ್ಲಿ ತುಂಬಿಕೊಡುವ ಪದ್ಧತಿಯನ್ನು ಆಯ್ಕೆ ಪ್ರಾರಂಭದ ಕ್ಯಾಲೆಂಡರ್ ವರ್ಷ ಮತ್ತು ಮುಂದಿನ ಎರಡು ಕ್ಯಾಲೆಂಡರ್ ವರ್ಷಗಳಲ್ಲಿ ಮಾತ್ರ ಮುಂದುವರಿಸಬೇಕು. ಮೂರನೆಯ ಕ್ಯಾಲೆಂಡರ್ ವರ್ಷದ ಕೊನೆಗೂ ಮೀಸಲಾಗಿದ್ದ ರಿಕ್ತ ಸ್ಥಾನಗಳನ್ನು ಸರಿಹೊಂದಿಸಲಾಗದಿದ್ದಲ್ಲಿ, ಅವುಗಳನ್ನು ರದ್ದುಗೊಳಿಸಿ ಮುಂದಿನ (ಅಂದರೆ ನಾಲ್ಕನೇ) ವರ್ಷದ ಪ್ರಾರಂಭದಿಂದ ಹೊಸದಾಗಿ ಲೆಕ್ಕ ಪ್ರಾರಂಭಿಸಬೇಕು.

12. ಆಯ್ಕೆಯಾದ ಅಭ್ಯರ್ಥಿಗಳು ನೇಮಕಾತಿ ಹೊಂದಿದ ಬಳಿಕ ಕೆಲಸಕ್ಕೆ ಹಾಜರಾಗದಿದ್ದಲ್ಲಿ ಹಾಗೆ ಉಳಿದು ಹೋಗುವ ರಿಕ್ತ ಸ್ಥಾನಗಳನ್ನು ಹೊಸ ರಿಕ್ತ ಸ್ಥಾನಗಳೆಂದು ಪರಿಗಣಿಸಿ ಮುಂದಿನ ಸಲ ರೋಸ್ಟರ್ ಪ್ರಕಾರ ವರ್ಗೀಕರಿಸಿ ಆಯ್ಕೆ ಮಾಡುವುದಕ್ಕಾಗಿ ಸೇರಿಸಿಕೊಳ್ಳಬೇಕು.

13. (ಅ) ಸರಕಾರಿ ನೌಕರಿಗಾಗಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಥವಾ ಇತರ ಹಿಂದುಳಿದ ವರ್ಗಗಳಿಗೆ ಸೇರಿದವರೆಂದು ಮೀಸಲಾತಿ ಸೌಲಭ್ಯ ಕೋರಿದ್ದಲ್ಲಿ



ಅವರು ಅರ್ಜಿಯ ಜೊತೆಗೆ ಈ ಆದೇಶಕ್ಕೆ ಲಗತ್ತಿಸಿದ ಅನುಬಂಧ-3 ರಲ್ಲಿರುವ ನಮೂನೆ 1,2, ಅಥವಾ 3ರಲ್ಲಿ ಅನ್ವಯಾನುಸಾರ ಒಂದು ಘೋಷಣೆ ಸಲ್ಲಿಸಬೇಕು. ಅಭ್ಯರ್ಥಿಗಳು ಮತ್ತು ಅವರ ತಂದೆ ತಾಯಿ ಅಥವಾ ಪೋಷಕರು (ತಂದೆ ತಾಯಿಗಳಲ್ಲಿ ಒಬ್ಬರೂ ಬದುಕಿಲ್ಲದಿದ್ದರೆ) ಆ ನಮೂನೆಯಲ್ಲಿ ಘೋಷಣೆಗೆ ಸಂಬಂಧಿಸಿದಂತೆ ಪ್ರಥಮ ಭಾಗ ಮಾತ್ರ ಭರ್ತಿ ಮಾಡಬೇಕು. ಘೋಷಣೆಗೆ ಅದೇ ನಮೂನೆಯಲ್ಲಿ ಹೆಸರಿಸಲಾದ ಅಧಿಕಾರಿಗಳಲ್ಲೊಬ್ಬರೆದುರು ಶಪಥ ಮಾಡಿರಬೇಕು. ಶೋಧನಾ ಪ್ರಮಾಣ ಪತ್ರಕ್ಕೆ ಸಂಬಂಧಿಸಿದಂತೆ ನಮೂನೆಯ ದ್ವಿತೀಯ ಭಾಗವನ್ನು ಭರ್ತಿ ಮಾಡಬಾರದು ಅಭ್ಯರ್ಥಿಗಳ ಆಯ್ಕೆ ಮುಗಿದ ಬಳಿಕ ಆಯ್ಕೆಯಾದ ಅಭ್ಯರ್ಥಿಗಳ ಘೋಷಣೆಗಳನ್ನು ಮಾತ್ರ ಅವರ ನೇಮಕಾತಿಗಿಂತ ಮೊದಲು ನೇಮಕಾತಿ ಪ್ರಾಧಿಕಾರಿಗಳು ಈ ರೀತಿ ಶೋಧಿಸಿಕೊಳ್ಳಬೇಕು.

(i) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಗ್ರೂಪ್ ಎ ಪ್ರವರ್ಗಕ್ಕೆ ಸೇರಿದ ಅಭ್ಯರ್ಥಿಗಳ ಘೋಷಣೆಗಳು.

ಘೋಷಣೆಗಳನ್ನು ನೇಮಕಾತಿ ಪ್ರಾಧಿಕಾರಿಗಳು ತಹಶೀಲ್ದಾರರಿಗೆ ಕಡಿಮೆಯಲ್ಲದ ದರ್ಜೆಯ ಕಂದಾಯ ಅಧಿಕಾರಿಗಳಿಗೆ ಸತ್ಯ ಶೋಧನೆಗಾಗಿ ಕಳುಹಿಸಬೇಕು. ಮತ್ತು ಅಭ್ಯರ್ಥಿಯು ಯಾವ ಕಂದಾಯ ಅಧಿಕಾರಿಯ ಅಧಿಕಾರಕ್ಕೊಳಪಟ್ಟ ಪ್ರದೇಶದಲ್ಲಿ ಸಾಮಾನ್ಯವಾಗಿ ವಾಸಿಸುವನೋ ಅದೇ ಅಧಿಕಾರಿಗೇ ಘೋಷಣೆಯನ್ನು ಕಳುಹಿಸಬೇಕು ಕಂದಾಯ ಅಧಿಕಾರಿಯು ಘೋಷಣೆಯ ಸತ್ಯ ಶೋಧನ ನಡೆಸಿ ಘೋಷಣೆ ಸತ್ಯವಿದ್ದಲ್ಲಿ ಆ ರೀತಿ ಪ್ರಮಾಣ ಪತ್ರವನ್ನು ನಮೂನೆಯ ದ್ವಿತೀಯ ಭಾಗದಲ್ಲಿ ನೇಮಕಾತಿ ಪ್ರಾಧಿಕಾರಕ್ಕೆ ಕಳುಹಿಸಬೇಕು ಮತ್ತು ಘೋಷಣೆ ಸತ್ಯಕ್ಕೆ ದೂರವಿದ್ದಲ್ಲಿ ಅದೇ ರೀತಿ ನೇಮಕಾತಿ ಪ್ರಾಧಿಕಾರಕ್ಕೆ ತಿಳಿಸಬೇಕು. ಅಭ್ಯರ್ಥಿಗಳ ಮತ್ತು ಅವರ ತಂದೆ ತಾಯಿ ಪೋಷಕರ ಉತ್ಪನ್ನ ಅಥವಾ ಉದ್ಯೋಗದ ಬಗ್ಗೆ ಶೋಧನೆ ಮಾಡಬೇಕಾಗಿಲ್ಲ.

(ii) ಹಿಂದುಳಿದ ವರ್ಗದ ಗ್ರೂಪ್ 'ಬಿ' ಗ್ರೂಪ್ 'ಸಿ' ಗ್ರೂಪ್ 'ಡಿ' ಮತ್ತು ಗ್ರೂಪ್ 'ಇ' ಪ್ರವರ್ಗಗಳಿಗೆ ಸೇರಿದ ಅಭ್ಯರ್ಥಿಗಳು ನೀಡಿದ ಘೋಷಣೆಗಳು,

ನೇಮಕಾತಿ ಪ್ರಾಧಿಕಾರಿಗಳು ಅಭ್ಯರ್ಥಿಗಳ ಮತ್ತು ಅವರ ತಂದೆ ತಾಯಿ ಪೋಷಕರ (ತಂದೆ ತಾಯಿ ಬದುಕಿಲ್ಲದಿದ್ದಲ್ಲಿ) ಜಾತಿ ಉತ್ಪನ್ನ ಉದ್ಯೋಗಗಳ ಸತ್ಯಶೋಧನೆಗಾಗಿ ಅವರ ಘೋಷಣೆಗಳನ್ನು ಕಳುಹಿಸಬೇಕು. ಗ್ರಾಮೀಣ ಪ್ರದೇಶದಲ್ಲಿ ಸಾಮಾನ್ಯವಾಗಿ ವಾಸಿಸುವ ಅಭ್ಯರ್ಥಿಗಳ ಘೋಷಣೆಗಳನ್ನು ಸಂಬಂಧಿತ ತಹಶೀಲ್ದಾರರಿಗೂ ಮತ್ತು ನಗರ ಪ್ರದೇಶದಲ್ಲಿ ಸಾಮಾನ್ಯವಾಗಿ ವಾಸಿಸುವ ಅಭ್ಯರ್ಥಿಗಳ ಘೋಷಣೆಗಳನ್ನು ಸ್ಥಳೀಯ ಸಂಸ್ಥೆಗಳ ಆಯುಕ್ತರು ಅಥವಾ ಚೀಫ್ ಆಫೀಸರುಗಳಿಗೆ ಕಳುಹಿಸಬೇಕು. ತಹಶೀಲ್ದಾರರು ಆಯುಕ್ತರು, ಚೀಫ್ ಆಫೀಸರರು, ಘೋಷಣೆಯ ಸತ್ಯ ಶೋಧನೆ ನಡೆಸಿ ಘೋಷಣೆ ಸತ್ಯವಿದ್ದಲ್ಲಿ ಆ ರೀತಿ ಪ್ರಮಾಣ ಪತ್ರವನ್ನು ನಮೂನೆಯ ದ್ವಿತೀಯ

ಭಾಗದಲ್ಲಿ ನೇಮಕ ಪ್ರಾಧಿಕಾರಕ್ಕೆ ಕಳುಹಿಸಬೇಕು. ಮತ್ತು ಘೋಷಣೆ ಸತ್ಯಕ್ಕೆ ದೂರವಿದ್ದಲ್ಲಿ ಅದೇ ರೀತಿ ನೇಮಕಾತಿ ಪ್ರಾಧಿಕಾರಕ್ಕೆ ತಿಳಿಸಬೇಕು. ಅಭ್ಯರ್ಥಿಗಳ ಅಥವಾ ಅವರ ತಂದೆ ತಾಯಿ ಪೋಷಕರ ಉತ್ಪನ್ನವನ್ನು ಅವರು ನೌಕರಿಗಾಗಿ ಅರ್ಜಿ ಕೊಟ್ಟ ದಿನಾಂಕದಂದು ಇರುವಂತೆ ಎಷ್ಟು ಎಂಬುದನ್ನು ಮಾತ್ರ ತಿಳಿಸಬೇಕು.

ಸತ್ಯಶೋಧನೆ ನಡೆಸಿದ ಬಳಿಕ ಘೋಷಣಾ ಪತ್ರದಲ್ಲಿ ಕೊಟ್ಟಿರುವ ಹೇಳಿಕೆ ಸುಳ್ಳು ಎಂದು ಸಾಬೀತಾದಲ್ಲಿ ಸುಳ್ಳು ಘೋಷಣೆ ನೀಡಿದವರ ವಿರುದ್ಧ ಭಾರತೀಯ ದಂಡ ಸಂಹಿತೆಯಲ್ಲಿನ ಸೂಕ್ತ ಕಲುಮಿನ ಮೇರೆಗೆ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಬೇಕು. ಸುಳ್ಳು ಘೋಷಣೆಗೊಳಪಟ್ಟ ಅಭ್ಯರ್ಥಿಗಳಿಗೆ ನೇಮಕಾತಿಯ ಅವಕಾಶವನ್ನೂ ನೀಡಬಾರದು.

(ಅ) ಸಾಮಾನ್ಯ ಅರ್ಹತೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಜಾತಿ, ಉತ್ಪನ್ನ, ಉದ್ಯೋಗಗಳ ಶೋಧನೆ ಮಾಡಬೇಕಿಲ್ಲ.

14. ಈ ಆದೇಶವು ಕೆಳಕಂಡ ಸಂಸ್ಥೆಗಳಿಗೂ ಅನ್ವಯಿಸುವುದು–

(i) ಸರಕಾರದ ಸ್ವಾಮ್ಯ ಅಥವಾ ನಿಯಂತ್ರಣಕ್ಕೊಳಪಟ್ಟ ಕಂಪನಿ ಕಾನೂನು ಅಥವಾ ಇತರ ಅಧಿನಿಯಮ ನಿಯಮ, ವಿನಿಯಮಗಳಡಿಯಲ್ಲಿ ಸ್ಥಾಪಿಸಲಾದ ಕಂಪನಿಗಳು ಬೋರ್ಡುಗಳು, ನಿಗಮಗಳು ಇತ್ಯಾದಿ.

(ii) ಅಲ್ಪ ಸಂಖ್ಯಾತರ ಸಂಸ್ಥೆಗಳನ್ನು ಹೊರತುಪಡಿಸಿ, ಸರಕಾರದಿಂದ ಉಪಾದಾನ ಅಥವಾ ಸಹಾಯ ಪಡೆಯುವ ಸಂಸ್ಥೆಗಳು, ಇಲ್ಲಿ 'ಉಪಾದಾನ' ಅಥವಾ 'ಸಹಾಯ' ಎಂಬುದು ಸರಕಾರ ನೀಡುವ ಆರ್ಥಿಕ ಮತ್ತು ಅಥವಾ ಇತರ ನೆರವು ಒಳಗೊಳ್ಳುವುದು.

15. ಈ ಆದೇಶವು ತಕ್ಷಣದಿಂದಲೇ ಜಾರಿಗೆ ಬರುತ್ತದೆ. ಪರಂತು.

(i) ಆಯ್ಕೆ ಪಟ್ಟಿಯನ್ನು ಈಗಾಗಲೇ ಪ್ರಕಟಿಸಿದ ಪ್ರಕರಣಗಳಲ್ಲಿ ಮೇಲೆ ಓದಲಾದ ಕ್ರಮ ಸಂಖ್ಯೆ (2)ಮತ್ತು (3) ರಲ್ಲಿರುವ ಆದೇಶ ಅಥವಾ ಈ ಆದೇಶವನ್ನು ಅನ್ವಯಿಸಬಾರದು ಮತ್ತು ಅದೇ ಆಯ್ಕೆ ಪಟ್ಟಿಯಿಂದ ನೇಮಕಾತಿ ಮಾಡಬಹುದು.

(ii) ಆಯ್ಕೆ ಪಟ್ಟಿಯನ್ನು ಇದುವರೆಗ ಪ್ರಕಟಿಸದಿರುವ ಪ್ರಕರಣಗಳಲ್ಲಿ

(ಅ) ಸ್ಪರ್ಧಾ ಪರೀಕ್ಷೆ ಅಥವಾ ಸಂದರ್ಶನ ಈಗಾಗಲೇ ಪ್ರಾರಂಭವಾಗಿದ್ದಲ್ಲಿ (ಅಥವಾ ಮುಗಿದಿದ್ದರೂ) ಹೊಸದಾಗಿ ಅರ್ಜಿಗಳನ್ನು ಕರೆಯಬಾರದು ನಿಗದಿತ ಕೊನೆಯ ದಿನಾಂಕದೊಳಗಾಗಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಲ್ಲಿ ಈ ಆದೇಶದ ಫಲಾನುಭವಿಗಳಾಗಲು ಇಚ್ಛಿಸಿದವರಿಗೆ ಅವರು ಅರ್ಜಿ ಸಲ್ಲಿಸಿದ ದಿನಾಂಕದಂದು ಇರುವಂತೆ ಅನುಬಂಧ 3 [illegible]



ಪುನರ್ವರ್ಗೀಕರಣ ಮಾಡಿ ಈ ಆದೇಶದಲ್ಲಿ ಅವರಿಂದ ಬರುವ ಘೋಷಣೆಗಳಂತೆ ಅಭ್ಯರ್ಥಿಗಳ ಪುನರ್ವರ್ಗೀಕರಣ ಮಾಡಿ ಈ ಆದೇಶದಲ್ಲಿ ನಿಗದಿಪಡಿಸಿದ ರೋಸ್ಟರ್‌ನಂತೆ ಮೀಸಲಾತಿ ಸೌಲಭ್ಯ ನೀಡಬೇಕು. ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು (ಅಥವಾ ಗರಿಷ್ಠ ವಯೋಮಿತಿಗಾಗಿ ಬೇರೆ ಯಾವುದಾದರೂ ದಿನವನ್ನು ಗೊತ್ತು ಪಡಿಸಿದರೆ ಅದೇ ದಿನಾಂಕದಂದು) ಇದ್ದ ಅವರ ವಯಸ್ಸಿನ ಪ್ರಕಾರ ಅದೇ ದಿನದಂದು ಜಾರಿಯಲ್ಲಿದ್ದ ಆದೇಶ ನಿಯಮಗಳಿಗನುಸಾರವಾಗಿ ಅವರು ಗರಿಷ್ಠ ವಯೋಮಿತಿಯಲ್ಲಿರುವರ ಎಂಬುದನ್ನು ನಿರ್ಧರಿಸಬೇಕು.

ಆ) ಸ್ಪರ್ಧಾ ಪರೀಕ್ಷೆ ಅಥವಾ ಸಂದರ್ಶನ ಇದುವರೆಗೆ ಪ್ರಾರಂಭವಾಗಿರದಿದ್ದರೆ, ಅರ್ಜಿ ಸಲ್ಲಿಸಲು ನಿಗದಿಯಾದ ಕೊನೆಯ ದಿನಾಂಕವನ್ನು ವಿಸ್ತರಿಸಿ ಎಲ್ಲಾ ಅಭ್ಯರ್ಥಿಗಳಿಗೂ ಈ ಆದೇಶದ ಪ್ರಕಾರ ಮೀಸಲಾತಿ ಸೌಲಭ್ಯ ನೀಡಬೇಕು. ಆದರೆ ಈಗಾಗಲೇ ಅರ್ಜಿ ಸಲ್ಲಿಸಿದ್ದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು (ಅಥವಾ ಗರಿಷ್ಠ ವಯೋಮಿತಿಗಾಗಿ ಬೇರೆ ಯಾವುದಾದರೂ ದಿನವನ್ನು ಗೊತ್ತುಪಡಿಸಿದ್ದರೆ ಅದೇ ದಿನಾಂಕದಂದು) ಇದ್ದ ಅವರ ವಯಸ್ಸಿನ ಪ್ರಕಾರ ಅದೇ ದಿನದಂದು ಜಾರಿಯಲ್ಲಿದ್ದ ಆದೇಶ ನಿಯಮಗಳಂತೆ ಅವರು ಗರಿಷ್ಠ ವಯೋಮಿತಿಯಲ್ಲಿರುವರೇ ಎಂಬುದನ್ನು ನಿರ್ಧರಿಸಬೇಕು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ಈ ಆದೇಶದ ಪ್ರಕಾರ ವಿಸ್ತರಿಸಲ್ಪಟ್ಟ ಅವಧಿಯಲ್ಲಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಲ್ಲಿ ಗ್ರೂಪ್ ಎ ಪ್ರವರ್ಗದವರಿಗೆ 35 ವರ್ಷಗಳು ಮತ್ತು ಗ್ರೂಪ್ ಬಿ, ಸಿ, ಹಾಗೂ ಡಿ. ಪ್ರವರ್ಗಗಳವರಿಗೆ 33 ವರ್ಷಗಳ ಗರಿಷ್ಠ ವಯೋಮಿತಿ ಸೌಲಭ್ಯ ನೀಡಬೇಕು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ. ಎಂ. ನಾಯ್ಕ,

ಸರ್ಕಾರದ ಅಪರ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

(ಸೇವಾ ನಿಯಮಗಳು)

## ಅನುಬಂಧ–1

| | | | | | |
|---|---|---|---|---|---|
| 1 | ಪ. ಜಾ. | 35 | ಸಾ. ಅ. | 68 | ಗ್ರೂ. ಡಿ. |
| 2 | ಪ. ಪಂ. | 36 | ಗ್ರೂ.ಡಿ. | 69 | ಪ. ಜಾ. |
| 3 | ಸಾ. ಅ. | 37 | ಗ್ರೂ.ಬಿ. | 70 | ಸಾ. ಅ. |
| 4 | ಗ್ರೂ. ಎ. | 38 | ಸಾ.ಅ. | 71 | ಗ್ರೂ. ಇ. |
| 5 | ಗ್ರೂ. ಬಿ. | 39 | ಗ್ರೂ. ಸಿ. | 72 | ಗ್ರೂ. ಬಿ. |
| 6 | ಪ. ಜಾ. | 40 | ಸಾ. ಅ. | 73 | ಸಾ. ಅ. |
| 7 | ಸಾ. ಅ. | 41 | ಪ. ಜಾ. | 74 | ಗ್ರೂ. ಸಿ. |
| 8 | ಗ್ರೂ. ಸಿ. | 42 | ಗ್ರೂ. ಎ. | 75 | ಗ್ರೂ. ಡಿ. |
| 9 | ಗ್ರೂ. ಡಿ. | 43 | ಸಾ. ಅ. | 76 | ಪ. ಜಾ. |
| 10 | ಸಾ. ಅ. | 44 | ಗ್ರೂ. ಬಿ. | 77 | ಸಾ. ಅ. |
| 11 | ಗ್ರೂ. ಇ. | 45 | ಗ್ರೂ. ಸಿ. | 78 | ಗ್ರೂ. ಸಿ. |
| 12 | ಗ್ರೂ. ಬಿ. | 46 | ಸಾ. ಅ. | 79 | ಗ್ರೂ. ಡಿ. |
| 13 | ಪ. ಜಾ. | 47 | ಗ್ರೂ. ಡಿ. | 80 | ಸಾ. ಅ. |
| 14 | ಸಾ. ಅ. | 48 | ಪ. ಜಾ. | 81 | ಗ್ರೂ. ಎ. |
| 15 | ಗ್ರೂ. ಸಿ. | 49 | ಸಾ. ಅ. | 82 | ಸಾ. ಅ. |
| 16 | ಗ್ರೂ. ಡಿ. | 50 | ಗ್ರೂ. ಇ. | 83 | ಪ. ಜಾ. |
| 17 | ಸಾ. ಅ. | 51 | ಗ್ರೂ.ಬಿ. | 84 | ಗ್ರೂ. ಬಿ. |
| 18 | ಗ್ರೂ. ಸಿ. | 52 | ಸಾ. ಅ. | 85 | ಸಾ. ಅ. |
| 19 | ಸಾ. ಅ. | 53 | ಗ್ರೂ. ಸಿ. | 86 | ಗ್ರೂ. ಸಿ. |
| 20 | ಪ. ಜಾ. | 54 | ಗ್ರೂ. ಡಿ. | 87 | ಗ್ರೂ. ಡಿ. |
| 21 | ಗ್ರೂ. ಎ. | 55 | ಪ. ಜಾ. | 88 | ಸಾ. ಅ. |
| 22 | ಗ್ರೂ. ಬಿ. | 56 | ಸಾ. ಅ. | 89 | ಗ್ರೂ. ಇ. |
| 23 | ಸಾ. ಅ. | 57 | ಗ್ರೂ. ಬಿ. | 90 | ಪ. ಜಾ. |
| 24 | ಗ್ರೂ. ಸಿ. | 58 | ಗ್ರೂ. ಸಿ. | 91 | ಸಾ. ಅ. |
| 25 | ಗ್ರೂ. ಡಿ. | 59 | ಸಾ. ಅ. | 92 | ಗ್ರೂ. ಬಿ. |
| 26 | ಸಾ. ಅ. | 60 | ಗ್ರೂ. ಸಿ. | 93 | ಗ್ರೂ. ಸಿ. |
| 27 | ಪ. ಜಾ. | 61 | ಗ್ರೂ. ಎ. | 94 | ಸಾ. ಅ. |
| 28 | ಗ್ರೂ. ಇ. | 62 | ಪ. ಜಾ. | 95 | ಗ್ರೂ. ಡಿ. |
| 29 | ಸಾ. ಅ. | 63 | ಸಾ.ಅ. | 96 | ಸಾ. ಅ. |
| 30 | ಗ್ರೂ. ಬಿ. | 64 | ಗ್ರೂ. ಬಿ. | 97 | ಪ. ಜಾ. |
| 31 | ಗ್ರೂ. ಸಿ. | 65 | ಗ್ರೂ. ಸಿ. | 98 | ಗ್ರೂ. ಬಿ. |
| 32 | ಸಾ. ಅ. | 66 | ಪ. ಪಂ. | 99 | ಗ್ರೂ. ಸಿ. |
| 33 | ಪ. ಪಂ. | 67 | ಸಾ. ಅ. | 100 | ಸಾ. ಅ. |



### ಸ್ಪಷ್ಟೀಕರಣ:–

| | |
|---|---|
| ಸಾ. ಅ – ಸಾಮಾನ್ಯ ಅರ್ಹತೆ | 32 |
| ಗ್ರೂ. ಎ. – ಗ್ರೂಪ್ ಎ ಗೆ ಮೀಸಲು | 5 |
| ಗ್ರೂ.ಬಿ – ಗ್ರೂಪ್ ಬಿ ಗೆ ಮೀಸಲು | 13 |
| ಗ್ರೂ.ಸಿ. – ಗ್ರೂಪ್ ಸಿ ಗೆ ಮೀಸಲು | 16 |
| ಗ್ರೂ.ಡಿ. – ಗ್ರೂಪ್ ಡಿ ಗೆ ಮೀಸಲು | 11 |
| ಗ್ರೂ.ಇ. – ಗ್ರೂಪ್ ಇ. ಗೆ ಮೀಸಲು | 5 |
| ಪ. ಜಾ. – ಪರಿಶಿಷ್ಟ ಜಾತಿಗೆ ಮೀಸಲು | 15 |
| ಪ. ಪಂ. – ಪರಿಶಿಷ್ಟ ಪಂಗಡಕ್ಕೆ ಮೀಸಲು | 3 |
| ಒಟ್ಟು | 100 |

'ಮುಖ್ಯ ಪಟ್ಟಿ'ಗೆ ಮತ್ತು 'ಹೆಚ್ಚಿನ ಪಟ್ಟಿಗೆ' ಪ್ರತ್ಯೇಕ ರೋಸ್ಟರ್ ಇಡತಕ್ಕದ್ದು.

### ಅನುಬಂಧ–2, ಆಯ್ಕೆ ವಿಧಾನ

(ಅ) ಸಂಬಂಧಿಸಿದ ಆಯ್ಕೆ ಪ್ರಾಧಿಕಾರವು ಎಲ್ಲಾ ಅರ್ಹ ಅರ್ಜಿದಾರರ ಒಂದು ಕ್ರೋಢೀಕೃತ ಯಾದಿ ತಯಾರಿಸಬೇಕು. ಅರ್ಜಿದಾರರು ಯಾವ ಜಾತಿ, ಪಂಗಡ, ವರ್ಗಗಳಿಗೆ ಸೇರಿದವರೆಂಬುದನ್ನು ಪರಿಗಣಿಸದೇ ಕೇವಲ ಅರ್ಹತೆ ಮಟ್ಟದ ಆಧಾರದ ಮೇಲೆ ಈ ಯಾದಿಯನ್ನು ತಯಾರಿಸಬೇಕು. (ಇನ್ನು ಮುಂದೆ ಈ ಯಾದಿಯನ್ನು "ಪ್ರಥಮಯಾದಿ'' ಎಂದು ಹೆಸರಿಸಲಾಗುವುದು.)

(ಆ) ಆ ಬಳಿಕ, ಸಾಮಾನ್ಯ ಅರ್ಹತೆಯ ಮೇರೆಗೆ ಆಯ್ಕೆ ಮಾಡಬೇಕಾದ ಹುದ್ದೆಗಳಷ್ಟು (ಅಂದರೆ ಪರಿಶಿಷ್ಟ ಜಾತಿ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಮೀಸಲಿಟ್ಟ ಹುದ್ದೆಗಳನ್ನು ಬಿಟ್ಟು ಉಳಿದ ಹುದ್ದೆ) ಅಭ್ಯರ್ಥಿಗಳ ಹೆಸರುಗಳನ್ನು "ಪ್ರಥಮಯಾದಿ'' ಯಿಂದ ಅವರ ಅರ್ಹತಾ ಮಟ್ಟಕ್ಕನುಗುಣವಾಗಿ ಮತ್ತು "ಪ್ರಥಮ ಯಾದಿ'' ಯ ಕ್ರಮಸಂಖ್ಯೆ ಒಂದರಿಂದಾದಿಗಿ ಬೇರ್ಪಡಿಸಿ ಎರಡನೇ ಯಾದಿಯನ್ನು ಆಯ್ಕೆ ಪ್ರಾಧಿಕಾರ ತಯಾರಿಸಬೇಕು. (ಇನ್ನು ಮುಂದೆ ಈ ಯಾದಿಯನ್ನು "ದ್ವಿತೀಯ ಯಾದಿ'' ಎಂದು ಹೆಸರಿಸಲಾಗುವುದು.)

(ಇ) 'ದ್ವಿತೀಯ ಯಾದಿ' ತಯಾರಿಸಿದ ಬಳಿಕ "ಪ್ರಥಮ ಯಾದಿ''ಯಲ್ಲಿ ಉಳಿದ ಅಭ್ಯರ್ಥಿಗಳಲ್ಲಿ ಮೀಸಲಾತಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳಿಗೆ ನೀಡಬೇಕಾದಷ್ಟು ಪ್ರಮಾಣದಲ್ಲಿ ಆಯಾ ಜಾತಿ, ಪಂಗಡ, ವರ್ಗಗಳಿಗೆ ಸೇರಿದ ಅಭ್ಯರ್ಥಿಗಳನ್ನೊಳಗೊಂಡ ಮೂರನೇ ಯಾದಿಯನ್ನು ಪ್ರಥಮ ಯಾದಿಯಲ್ಲಿನ ಅರ್ಹತಾ ಮಟ್ಟಕ್ಕನುಗುಣವಾಗಿ ಆಯ್ಕೆ ಪ್ರಾಧಿಕಾರ ತಯಾರಿಸಬೇಕು.

(ಈ) ಅನಂತರ "ದ್ವಿತೀಯ ಯಾದಿ'' ಮತ್ತು "ತೃತೀಯ ಯಾದಿ''ಗಳಲ್ಲಿರುವ ಹೆಸರುಗಳನ್ನು ಪ್ರಥಮ ಯಾದಿಯಲ್ಲಿನ ಅರ್ಹತಾ ಮಟ್ಟಕ್ಕನುಗುಣವಾಗಿ ಒಂದು ಗೂಡಿಸಿ ಒಂದು ಅಂತಿಮ ಯಾದಿಯನ್ನು ಆಯ್ಕೆ ಪ್ರಾಧಿಕಾರ ತಯಾರಿಸಬೇಕು. ಈ ಅಂತಿಮ ಯಾದಿಯೇ ಹುದ್ದೆಗಳನ್ನು ತುಂಬಲು ತಯಾರಿಸಬೇಕಾದ ಆಯ್ಕೆ ಪಟ್ಟಿಯಾಗುವುದು.

(ಉ) ಆಯ್ಕೆ ಪಟ್ಟಿ ತಯಾರಿಸಿದ ಬಳಿಕ ಒಂದು ಹೆಚ್ಚಿನ ಪಟ್ಟಿ ತಯಾರಿಸಬೇಕಾದಲ್ಲಿ "ಪ್ರಥಮಯಾದಿ''ಯಿಂದ ಮುಖ್ಯ ಪಟ್ಟಿಗೆ ಸೇರಿದ ಹೆಸರುಗಳನ್ನು ಬಿಟ್ಟು ಉಳಿದ ಹೆಸರುಗಳಿಂದ ಮೇಲೆ (ಅ) (ಇ) ಮತ್ತು (ಈ) ಗಳಲ್ಲಿ ... ತಯಾರಿಸುವುದು.

ಕರ್ನಾಟಕ ಸರ್ಕಾರದ ನಡವಳಿಗಳು

## ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ :- ಭಾರತ ಸಂವಿಧಾನದ ಅನುಚ್ಛೇದ 16 (4)ರ ಅನ್ವಯ ರಾಜ್ಯ ಸಿವಿಲ್ ಸೇವೆಗಳಿಗೆ ನೇರ ನೇಮಕಾತಿಯಲ್ಲಿ ಮೀಸಲಾತಿ.

ಓದಲಾಗಿದೆ :-

(1) ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 56 ಸೆಹಿಮ 94, ದಿನಾಂಕ 5-11-1994.

(2) ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 19 ಸೆಹಿಮ 89, ದಿನಾಂಕ 12-7-1989.

(3) ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 19 ಸೆಹಿಮ 89, ದಿನಾಂಕ 22-7-1989.

(4) ಸರ್ಕಾರಿ ಆದೇಶ ಸಂಖ್ಯೆ : ಸಕಇ 251 ಬಿಸಿಎ 94, ದಿನಾಂಕ 31-1-1995.

ಪ್ರಸ್ತಾವನೆ :

ಮೇಲೆ ಕಾಣಿಸಿದ ದಿನಾಂಕ 31ನೇ ಜನವರಿ 1995ರ ಸರ್ಕಾರಿ ಆದೇಶದಲ್ಲಿ ಹಿಂದುಳಿದ ವರ್ಗದವರ ಮೀಸಲಾತಿ ಪ್ರಮಾಣವನ್ನು ಶೇಕಡಾ 50ಕ್ಕೆ ನಿಗದಿಪಡಿಸಿದ ಹಿನ್ನಲೆಯಲ್ಲಿ, ರಾಜ್ಯ ಸಿವಿಲ್ ಸೇವೆಗಳ, ಸರ್ಕಾರದ ಅಧೀನದಲ್ಲಿ ಬರುವ ಸೇವೆಗಳ ಅಥವಾ ಹುದ್ದೆಗಳ ನೇಮಕಾತಿಯಲ್ಲಿ ಭಾರತ ಸಂವಿಧಾನದ 16(4)ನೇ ಅನುಚ್ಛೇದದ ಪ್ರಕಾರ ಅಳವಡಿಸಬೇಕಾದ ರೋಸ್ಟರ್ ಬಗ್ಗೆ ಪರಿಶೀಲಿಸಲಾಗಿದೆ.

ಅದರ ಪರಿಣಾಮವಾಗಿ, ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

### ಆದೇಶ

ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 08 ಸೆಹಿಮ 95, ಬೆಂಗಳೂರು, ದಿನಾಂಕ 20ನೇ ಜೂನ್ 1995.

ಮೇಲಿನ (1)ರಲ್ಲಿ ಓದಲಾದ ದಿನಾಂಕ 5ನೇ ನವೆಂಬರ್ 1994ರ ಆದೇಶವನ್ನು ರದ್ದುಪಡಿಸುತ್ತಾ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ರಾಜ್ಯ ಸಿವಿಲ್ ಸೇವೆಗಳ ನೇರ ನೇಮಕಗಳಲ್ಲಿ ಒದಗಿಸಲಾಗಿರುವ ಪಂಸತ ಮೀಸಲಾತಿಯನ್ನು ಜಾರಿಗೆ ತರಲು ಈ ಕೆಳಕಂಡಂತೆ ಆದೇಶಿಸಲಾಗಿದೆ.

(6)



1. ಪ್ರವರ್ಗ-I, ಪ್ರವರ್ಗ-II (ಎ), ಪ್ರವರ್ಗ-II (ಬಿ), ಪ್ರವರ್ಗ-III (ಎ), ಪ್ರವರ್ಗ-III (ಬಿ) ಮುಂತಾದ ಪದ ಸಮೂಹಗಳು ಸರ್ಕಾರಿ ಆದೇಶ ಸಂಖ್ಯೆ ಸಕಇ 150 ಬಿಸಿಎ 94, ದಿನಾಂಕ 17ನೇ ಸೆಪ್ಟೆಂಬರ್ 1994ರಲ್ಲಿನ ವರ್ಗೀಕರಣದ ಅರ್ಥವನ್ನೇ ಹೊಂದಿರುತ್ತದೆ. ಈ ಇತರೆ ಹಿಂದುಳಿದವರನ್ನು ವರ್ಗೀಕರಣದ ಉದ್ದೇಶಕ್ಕಾಗಿ ಸಮಾಜ ಕಲ್ಯಾಣ ಇಲಾಖೆ ಆಗಿಂದಾಗ್ಗೆ ಹೊರಡಿಸುವ ಆದೇಶಗಳಲ್ಲಿ ನೀಡುವ ವರ್ಗೀಕರಣವನ್ನೇ ಅನುಸರಿಸತಕ್ಕದ್ದು. ನೇರ ನೇಮಕಾತಿಗಳಲ್ಲಿ ಮೀಸಲಾತಿಯನ್ನು ಮೇಲಿನ (4)ರಲ್ಲಿ ಓದಲಾಗಿರುವ ಆದೇಶದಲ್ಲಿ ನಿಗದಿಪಡಿಸಿದ ಶೇಕಡಾವಾರಿನಲ್ಲಿ ಪ್ರತಿಯೊಂದು ನೇಮಕಾತಿ ಪ್ರಾಧಿಕಾರದಡಿಯಲ್ಲಿನ ಪ್ರತಿಯೊಂದು ವೃಂದಕ್ಕೂ ಅನ್ವಯಿಸತಕ್ಕದ್ದು. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಸಮೂಹಪಂಗಡ ಮೀಸಲಿರಿಸಬೇಕಾದ ರಿಕ್ತ ಸ್ಥಾನಗಳ ಮೊತ್ತವನ್ನು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿರುವಂತೆ 100 ರಿಕ್ತ ಸ್ಥಾನಗಳ ರೋಸ್ಟರ್ ಆಧಾರದ ಮೇಲೆ ಲೆಕ್ಕ ಮಾಡತಕ್ಕದ್ದು. ಪ್ರತಿಯೊಂದು ನೇಮಕಾತಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಪ್ರತಿಯೊಂದು ವೃಂದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಈ ರೋಸ್ಟರಿನ ಒಂದನೇ ಬಿಂದುವಿನಿಂದ ಪ್ರಾರಂಭವಾಗುವಂತೆ ರೋಸ್ಟರನ್ನು ಅಳವಡಿಸಿಕೊಳ್ಳಬೇಕು. ನೇರ ನೇಮಕಾತಿ ರಿಕ್ತ ಸ್ಥಾನಗಳನ್ನು ರೋಸ್ಟರಿನ ಒಂದನೇ ಬಿಂದುವಿನಿಂದ ಪ್ರಾರಂಭಿಸಿ 100ನೇ ಬಿಂದುವಿನವರೆಗೂ ಸಂಬಂಧಿಸಿದ ಆಯಾ ಗುಂಪಿನ ಅಭ್ಯರ್ಥಿಗಳಿಂದ ಆಯ್ಕೆ ಮಾಡಿ ಭರ್ತಿ ಮಾಡತಕ್ಕದ್ದು. ಉದಾಹರಣೆಗೆ ಈ ಆದೇಶ ನಂತರದ ಮೊದಲನೇ ನೇಮಕಾತಿಯಲ್ಲಿ 21ನೇ ರಿಕ್ತ ಸ್ಥಾನದವರೆಗೆ ಭರ್ತಿ ಮಾಡಲ್ಪಟ್ಟಲ್ಲಿ ಮುಂದಿನ ನೇಮಕಾತಿಯಲ್ಲಿ ರೋಸ್ಟರನ್ನು 22ನೇ ಬಿಂದುವಿನಿಂದ ಚಾಲನೆಗೊಳಿಸತಕ್ಕದ್ದು. ನಂತರದ ನೇಮಕಾತಿಗಳಲ್ಲಿಯೂ ಇದೇ ಪದ್ಧತಿಯನ್ನು 100ನೇ ರಿಕ್ತ ಸ್ಥಾನ ಭರ್ತಿ ಆಗುವವರೆಗೂ ಅನುಸರಿಸತಕ್ಕದ್ದು. 100 ರಿಕ್ತ ಸ್ಥಾನಗಳನ್ನು ಭರ್ತಿ ಮಾಡಿದನಂತರ ರೋಸ್ಟರಿನ ಮೊದಲನೇ ಬಿಂದುವಿನಿಂದ ಪುನರಾರಂಭಿಸತಕ್ಕದ್ದು. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಬ್ಯಾಕ್‌ಲಾಗನ್ನು ಹೊರತುಪಡಿಸಿ ದಿನಾಂಕ 5-11-94 ಅಥವಾ ಅದಕ್ಕೆ ಹಿಂದೆ ಜಾರಿಯಲ್ಲಿದ್ದ ಸರ್ಕಾರಿ ಆದೇಶಗಳಿಗನುಸಾರ ವರ್ಗೀಕರಿಸಲ್ಪಟ್ಟು ಭರ್ತಿಯಾಗದೇ ಆ ಆದೇಶ ಜಾರಿಗೆ ಬಂದ ದಿನಾಂಕದಂದು ಉಳಿದುಕೊಂಡಿರುವ ಎಲ್ಲಾ ರಿಕ್ತ ಸ್ಥಾನಗಳೂ ಆ ವರ್ಗೀಕರಣವನ್ನು ಕಳೆದುಕೊಳ್ಳುತ್ತವೆ ಮತ್ತು ಅವುಗಳನ್ನು ಹೊಸ ರಿಕ್ತ ಸ್ಥಾನಗಳೆಂದು ಪರಿಗಣಿಸತಕ್ಕದ್ದು. ಈ ಸರ್ಕಾರಿ ಆದೇಶದಲ್ಲಿ ನಿಗದಿಪಡಿಸಲಾದ ರೋಸ್ಟರ್ ಅಂತಹಾ ರಿಕ್ತ ಸ್ಥಾನಗಳಿಗೆ ಮತ್ತು ಇನ್ನು ಮುಂದೆ ಉದ್ಭವಿಸುವ ರಿಕ್ತ ಸ್ಥಾನಗಳಿಗೆ ಅನ್ವಯಿಸತಕ್ಕದ್ದು.

2. ಪ್ರತಿಯೊಂದು ಸಮೂಹದಲ್ಲಿ ಅಂದರೆ ಸಾಮಾನ್ಯ ವರ್ಗ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ಇತರೆ ಹಿಂದುಳಿದ ವರ್ಗಗಳ ಪ್ರತಿ ಸಮೂಹದಲ್ಲಿ ಪ್ರತಿ ಹತ್ತನೇ

ರಿಕ್ತ ಸ್ಥಾನವನ್ನು ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 9ರ ಉದ್ದೇಶಕ್ಕಾಗಿ ಮಾಜಿ ಸೈನಿಕರಿಗೆ ಮೀಸಲಿಡತಕ್ಕದ್ದು.

3. ಆಯ್ಕೆ ಪ್ರಾಧಿಕಾರಿಯು ನೇಮಕಾತಿ ನಿಯಮಾನುಸಾರ ಒಂದೇ ವರ್ಗದ ಹುದ್ದೆಗಳ ಮುಖ್ಯ ಪಟ್ಟಿ ಮತ್ತು ಹೆಚ್ಚುವರಿ ಪಟ್ಟಿಯನ್ನು ಸಿದ್ಧಪಡಿಸಬೇಕಾದ ಸಂದರ್ಭಗಳಲ್ಲಿ ರೋಸ್ಟರನ್ನು ಪ್ರತ್ಯೇಕವಾಗಿ ಅಳವಡಿಸುತ್ತಾ ಎರಡು ಪಟ್ಟಿಗಳನ್ನು ಪ್ರತ್ಯೇಕವಾಗಿ ಸಿದ್ಧಪಡಿಸತಕ್ಕದ್ದು. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳ ಪ್ರತಿ ಗುಂಪಿಗೆ ಮೀಸಲಿರಿಸಬೇಕಾದ ರಿಕ್ತ ಸ್ಥಾನಗಳ ಸಂಖ್ಯೆಯನ್ನು ರೋಸ್ಟರ್ ಅನುಸಾರ ಲೆಕ್ಕಹಾಕತಕ್ಕದ್ದು ಮತ್ತು ಮುಖ್ಯ ಪಟ್ಟಿ ಮತ್ತು ಹೆಚ್ಚುವರಿ ಪಟ್ಟಿಯಲ್ಲಿ ಆಯ್ಕೆ ಮಾಡಬೇಕಾದ ಅಭ್ಯರ್ಥಿಗಳ ಸಂಖ್ಯೆಯನ್ನು ನೇಮಕಾತಿ ಪ್ರಾಧಿಕಾರಿ ಆಯ್ಕೆ ಪ್ರಾಧಿಕಾರಕ್ಕೆ ಸ್ಪಷ್ಟವಾಗಿ ತಿಳಿಸತಕ್ಕದ್ದು.

4. ಪ್ರಕಟಿತ ರಿಕ್ತ ಸ್ಥಾನಗಳ ಸಂಖ್ಯೆಗಿಂತ ಲಭ್ಯವಾಗುವ ಅಭ್ಯರ್ಥಿಗಳು ಕಡಿಮೆ ಇದ್ದಲ್ಲಿ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಮೀಸಲಾತಿಯ, ವಾಸ್ತವವಾಗಿ ಆಯ್ಕೆ ಮಾಡಿಕೊಳ್ಳಲಾದ ಅಭ್ಯರ್ಥಿಗಳ ಸಂಖ್ಯೆಗನುಗುಣವಾಗಿರತಕ್ಕದ್ದು.

5. ಈ ಆದೇಶದಲ್ಲಿ ಒದಗಿಸಲಾದ ಮೀಸಲಾತಿಯನ್ನು ಸರಿಯಾಗಿ ಜಾರಿಗೊಳಿಸಲು ಅನುಸರಿಸಬೇಕಾದ ಆಯ್ಕೆ ವಿಧಾನವನ್ನು ಈ ಆದೇಶದ ಅನುಬಂಧ-2ರಲ್ಲಿ ವಿವರಿಸಲಾಗಿದೆ. ಇದನ್ನು ಲೋಕ ಸೇವಾ ಆಯೋಗ ಮತ್ತು ಇತರೆ ಆಯ್ಕೆ ಪ್ರಾಧಿಕಾರಿಗಳು ಅನುಸರಿಸತಕ್ಕದ್ದು.

6. ಒಂದು ವೇಳೆ, ಯಾವುದೇ ವರ್ಗದ ಹುದ್ದೆಗೆ ಮಾಡಲಾದ ನೇಮಕಾತಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸೂಕ್ತ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ, ಅವರಿಗಾಗಿ ಮೀಸಲಾದ ರಿಕ್ತ ಸ್ಥಾನಗಳನ್ನು ಮೀಸಲಾತಿಯಿಂದ ವಿಮುಕ್ತಿಗೊಳಿಸುವಂತಿಲ್ಲ ಮತ್ತು ಈ ರಿಕ್ತ ಸ್ಥಾನಗಳನ್ನು ತುಂಬುವಲ್ಲಿ ಮೇಲೆ (2) ಮತ್ತು (3) ರಲ್ಲಿ ಓದಲಾಗಿರುವ ಸರ್ಕಾರಿ ಆದೇಶಗಳ ಸಂಖ್ಯೆ : ಸಿಆಸುಇ 19 ಸೇಮಿಮ 89 ದಿನಾಂಕ : 12-7-1989 ಮತ್ತು 22-7-1989ರಲ್ಲಿ ಹೇಳಲಾಗಿರುವ ಪದ್ಧತಿಯನ್ನು ಯಥಾವತ್ತಾಗಿ ಅನುಸರಿಸತಕ್ಕದ್ದು.

7. ಈ ಆದೇಶದಲ್ಲಿ, ಪ್ರವರ್ಗ-I, ಪ್ರವರ್ಗ-II (ಎ), ಪ್ರವರ್ಗ-II (ಬಿ), ಪ್ರವರ್ಗ-III (ಎ) ಮತ್ತು ಪ್ರವರ್ಗ-III (ಬಿ) ಇವರುಗಳಿಗಾಗಿ ಗುರುತಿಸಲ್ಪಟ್ಟ ಆದರೆ ಆಯಾ ವರ್ಗದ ಅರ್ಹ ಅಭ್ಯರ್ಥಿಗಳ ಲಭ್ಯತೆಯಲ್ಲಿನ ಕೊರತೆಯಿಂದಾಗಿ ಭರ್ತಿಮಾಡಲಾಗದ ರಿಕ್ತ ಸ್ಥಾನಗಳನ್ನು ಸಾಮಾನ್ಯ ವರ್ಗದ ಅಭ್ಯರ್ಥಿಗಳಿಂದ ಭರ್ತಿಮಾಡತಕ್ಕದ್ದು ಮತ್ತು ಈ ರೀತಿ ನಷ್ಟಗೊಂಡ ರಿಕ್ತ ಸ್ಥಾನಗಳನ್ನು ಮುಂದಿನ ಮತ್ತು ತದನಂತರದ ನೇಮಕಾತಿಗಳಲ್ಲಿ ಈ ಕೆಳಗೆ ಕಾಣಿಸಿದಂತೆ ಮುಂದಕ್ಕೆ ಕೊಂಡೊಯ್ಯತಕ್ಕದ್ದು.





8. ಅದೇ ಕ್ಯಾಲೆಂಡರ್ ವರ್ಷದಲ್ಲಿ ಅಥವಾ ನಂತರದ ಎರಡು ಕ್ಯಾಲೆಂಡರ್ ವರ್ಷಗಳಲ್ಲಿ ಅದೇ ವರ್ಗದ ಹುದ್ದೆಗಳಿಗೆ ಆಗುವ ನೇರ ನೇಮಕಾತಿಗಳಲ್ಲಿ ಈ ಆದೇಶದಲ್ಲಿ ನಿಗದಿಪಡಿಸಿದ ರೋಸ್ಟರ್ ಅನ್ವಯ ಮತ್ತು ನಿರ್ದಿಷ್ಟಪಡಿಸಲಾದ ವಿಧಾನದಲ್ಲಿ ಹಿಂದುಳಿದ ವರ್ಗಗಳವರಿಗೆ ರಿಕ್ತ ಸ್ಥಾನಗಳಲ್ಲಿ ಮೀಸಲಾತಿಯನ್ನು ನಿಗದಿಪಡಿಸತಕ್ಕದ್ದು. ಆದರೆ, ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳ ಲಭ್ಯತೆಯಲ್ಲಿನ ಕೊರತೆಯಿಂದಾಗಿ ನೇಮಕಾತಿಯಲ್ಲಿ ಭರ್ತಿಯಾಗದೇ ಉಳಿದ ಮೇಲಿನ ಕಂಡಿಕೆ 7ರನುಸಾರ ಮುಂದಕ್ಕೆ ಕೊಂಡೊಯ್ಯಲಾದ ರಿಕ್ತ ಸ್ಥಾನಗಳನ್ನು ಅನುಕ್ರಮವಾಗಿ ಸಂಬಂಧಿಸಿದ ಇತರೆ ಹಿಂದುಳಿದ ವರ್ಗಗಳ ಸಮೂಹಗಳಿಗೆ ಮುಂದಿನ ಆಯ್ಕೆಯಲ್ಲಿಗಳಲ್ಲಿ ಸರಿದೂಗಿಸತಕ್ಕದ್ದು. ಈ ಉದ್ದೇಶಕ್ಕಾಗಿ ವಿವಿಧ ಇತರೆ ಹಿಂದುಳಿದ ವರ್ಗಗಳ ಸಮೂಹದವರಿಗೆ ಕಂಡಿಕೆ 7ರನುಸಾರ ನಷ್ಟವಾದ ರಿಕ್ತ ಸ್ಥಾನಗಳನ್ನು ಮುಂದಿನ ತಕ್ಷಣದ ಅಥವಾ ನಂತರದ ನೇರ ನೇಮಕಾತಿಗಳಲ್ಲಿ ಸಾಮಾನ್ಯ ವರ್ಗದ ಗುಂಪಿನಲ್ಲಿ ಲಭ್ಯವಾಗುವ ರಿಕ್ತ ಸ್ಥಾನಗಳನ್ನು ಅಂತಹಾ ಪ್ರತಿಯೊಂದು ಸಮೂಹಕ್ಕೂ ಒದಗಿಸುವ ಮೂಲಕ ನಷ್ಟವನ್ನು ಭರ್ತಿ ಮಾಡತಕ್ಕದ್ದು.

9. ಮೇಲಿನ ಕಂಡಿಕೆ 8ರಲ್ಲಿ ಹೇಳಲಾದಂತೆ ಅಭ್ಯರ್ಥಿಗಳ ಕೊರತೆಯಿಂದಾಗಿ ಮೀಸಲಾತಿ ವರ್ಗಗಳ ರಿಕ್ತ ಸ್ಥಾನಗಳನ್ನು ಭರ್ತಿ ಮಾಡಲಾಗಿದೆಯೇ ಉಳಿದು ಹೋದ ಮತ್ತು ನಂತರದ ಆಯ್ಕೆಗಳಲ್ಲಿ ನಷ್ಟವನ್ನು ಭರ್ತಿ ಮಾಡಲು ಕೊಂಡೊಯ್ಯುವ ಪ್ರಕ್ರಿಯೆಯನ್ನು ಮೊದಲನೇ ಕ್ಯಾಲೆಂಡರ್ ವರ್ಷದ ಆಯ್ಕೆಗಳಲ್ಲಿ ಮತ್ತು ನಂತರದ ಎರಡು ಕ್ಯಾಲೆಂಡರ್ ವರ್ಷಗಳ ಆಯ್ಕೆಗಳಲ್ಲಿ ಮಾತ್ರ ಮುಂದುವರಿಸತಕ್ಕದ್ದು. ಮೂರನೇ ಕ್ಯಾಲೆಂಡರ್ ವರ್ಷದ ಅಂತ್ಯದಲ್ಲಿ ಯಾವುದೇ ಮೀಸಲಾತಿ ರಿಕ್ತ ಸ್ಥಾನವು ಹೊಂದಾಣಿಕೆಯಾಗದೆಯೇ ಉಳಿದುಕೊಂಡರೆ, ಅವು ವರ್ಗೀಕರಣವನ್ನು ಕಳೆದುಕೊಳ್ಳುತ್ತವೆ ಮತ್ತು ಮುಂದಿನ (ನಾಲ್ಕನೆಯ) ಕ್ಯಾಲೆಂಡರ್ ವರ್ಷದಲ್ಲಿ ಅವುಗಳನ್ನು ಹೊಸ ರಿಕ್ತ ಸ್ಥಾನಗಳೆಂದು ಪರಿಗಣಿಸಿ ರೋಸ್ಟರನ್ನು ಮುಂದುವರಿಸತಕ್ಕದ್ದು.

10. ಆಯ್ಕೆಯಾದ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗದ ಕಾರಣ ಭರ್ತಿಯಾಗದೆಯೇ ಉಳಿದ ರಿಕ್ತ ಸ್ಥಾನಗಳನ್ನು ಹೊಸ ರಿಕ್ತ ಸ್ಥಾನಗಳೆಂದು ಪರಿಗಣಿಸತಕ್ಕದ್ದು.

11. ಮೀಸಲಾತಿ ಸೌಲಭ್ಯವನ್ನು ಪಡೆದುಕೊಳ್ಳುವಲ್ಲಿ ಮತ್ತು ಪರಿಶೀಲಿಸುವಲ್ಲಿ ಸರ್ಕಾರದಲ್ಲಿ ಸಮಾಜ ಕಲ್ಯಾಣ ಇಲಾಖೆ ಆಗಿಂದಾಗ್ಗೆ ಹೊರಡಿಸುವ ಮಾರ್ಗಸೂಚನೆಗಳನ್ನು ಅನುಸರಿಸತಕ್ಕದ್ದು.

12. ಸಂಬಂಧಿಸಿದ ಸರ್ಕಾರದ ಕಾರ್ಯದರ್ಶಿಗಳು :

(i) ಸ್ಥಳೀಯ ಸಂಸ್ಥೆಗಳು :

(ii) ಸರ್ಕಾರದ ಸ್ವಾಮ್ಯ ಅಥವಾ ನಿಯಂತ್ರಣಕ್ಕೊಳಪಡುವ ಹಾಗೂ ಕಂಪೆನಿ ಅಧಿನಿಯಮ, ಇತರೆ ಅಧಿನಿಯಮ, ನಿಯಮ ಇತ್ಯಾದಿಗಳಡಿ ಸ್ಥಾಪಿಸಲಾದ ಕಂಪೆನಿ, ಕಾರ್ಪೊರೇಷನ್, ಬೋರ್ಡ್, ನಿಗಮ ಇತ್ಯಾದಿ ;

(iii) ಅಲ್ಪ ಸಂಖ್ಯಾತರ ಸಂಸ್ಥೆಗಳನ್ನು ಹೊರತುಪಡಿಸಿ ಸರ್ಕಾರದಿಂದ ಅನುದಾನ ಅಥವಾ ಸಹಾಯ ಪಡೆಯುವ ಸಂಸ್ಥೆಗಳು (ಇಲ್ಲಿ 'ಅನುದಾನ' ಅಥವಾ 'ಸಹಾಯ' ಎಂದರೆ ಸರ್ಕಾರ ನೀಡುವ ಆರ್ಥಿಕ ಮತ್ತು ಅಥವಾ ಇತರ ನೆರವು ಒಳಗೊಳ್ಳುವುದು).

ಇವುಗಳಿಗೆ ಅನ್ವಯವಾಗುವ ಸಂಬಂಧಿಸಿದ ಕಾನೂನುಗಳಡಿಯಲ್ಲಿ ಸೂಕ್ತ ಸೂಚನೆ / ಆದೇಶಗಳನ್ನು ಹೊರಡಿಸತಕ್ಕದ್ದು.

13. ಈ ಆದೇಶವು ತಕ್ಷಣದಿಂದ ಜಾರಿಗೆ ಬರುತ್ತದೆ. ಆದರೆ, ಯಾವುದೇ ವೃಂದದ ಹುದ್ದೆಗಳ ಸಂಬಂಧದಲ್ಲಿ ಈಗಾಗಲೇ ನೇರ ನೇಮಕಾತಿ ಪ್ರಕ್ರಿಯೆ ಪ್ರಾರಂಭಗೊಂಡಿದ್ದು ಈ ಆದೇಶ ಹೊರಡಿಸುವ ವೇಳೆಗೆ ಬಾಕಿಯಿದ್ದಲ್ಲಿ, ಆ ನೇರ ನೇಮಕಾತಿ ಪ್ರಕ್ರಿಯೆಯನ್ನು ಸಮಾಜ ಕಲ್ಯಾಣ ಇಲಾಖೆ ಪ್ರತ್ಯೇಕವಾಗಿ ಹೊರಡಿಸುವ ಆದೇಶದನ್ವಯ ಪೂರ್ಣಗೊಳಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಎ.ಕೆ.ಎಂ. ನಾಯಕ್
ಸರ್ಕಾರದ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.



## ಅನುಬಂಧ - 1

**ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 08 ಸೇಹಿಮ 95,**
**ದಿನಾಂಕ 20ನೇ ಜೂನ್ 1995**

| | | | |
|---|---|---|---|
| 1. ಪ.ಜಾ. | 26. ಸಾ.ಅ | 51. II (ಎ) | 76. ಸಾ.ಅ. |
| 2. ಸಾ.ಅ. | 27. ಪ.ಜಾ. | 52. ಸಾ.ಅ. | 77. II (ಎ) |
| 3. ಪ.ಪಂ. | 28. ಸಾ.ಅ. | 53. ಪ.ಜಾ. | 78. ಸಾ.ಅ |
| 4. ಸಾ.ಅ. | 29. II (ಎ) | 54. ಸಾ.ಅ. | 79. I |
| 5. I | 30. ಸಾ.ಅ. | 55. II (ಎ) | 80. ಸಾ.ಅ. |
| 6. ಸಾ.ಅ. | 31. I | 56. ಸಾ.ಅ. | 81. ಪ.ಜಾ. |
| 7. II (ಎ) | 32. ಸಾ.ಅ. | 57. I | 82. ಸಾ.ಅ. |
| 8. ಸಾ.ಅ. | 33. ಪ.ಜಾ. | 58. ಸಾ.ಅ. | 83. III (ಬಿ) |
| 9. ಪ.ಜಾ. | 34. ಸಾ.ಅ. | 59. ಪ.ಜಾ. | 84. ಸಾ.ಅ. |
| 10. ಸಾ.ಅ. | 35. II (ಬಿ) | 60. ಸಾ.ಅ. | 85. II (ಎ) |
| 11. II (ಬಿ) | 36. ಸಾ.ಅ. | 61. II (ಬಿ) | 86. ಸಾ.ಅ. |
| 12. ಸಾ.ಅ. | 37. II (ಎ) | 62. ಸಾ.ಅ. | 87. II (ಬಿ) |
| 13. II (ಎ) | 38. ಸಾ.ಅ. | 63. II (ಎ) | 88. ಸಾ.ಅ. |
| 14. ಸಾ.ಅ. | 39. ಪ.ಪಂ. | 64. ಸಾ.ಅ. | 89. ಪ.ಜಾ. |
| 15. ಪ.ಜಾ. | 40. ಸಾ.ಅ. | 65. III (ಬಿ) | 90. ಸಾ.ಅ. |
| 16. ಸಾ.ಅ. | 41. ಪ.ಜಾ. | 66. ಸಾ.ಅ. | 91. II (ಎ) |
| 17. III (ಎ) | 42. ಸಾ.ಅ. | 67. ಪ.ಜಾ. | 92. ಸಾ.ಅ. |
| 18. ಸಾ.ಅ. | 43. III (ಬಿ) | 68. ಸಾ.ಅ. | 93. ಪ.ಜಾ. |
| 19. III (ಬಿ) | 44. ಸಾ.ಅ. | 69. II (ಎ) | 94. ಸಾ.ಅ. |
| 20. ಸಾ.ಅ. | 45. II (ಎ) | 70. ಸಾ.ಅ. | 95. III (ಎ) |
| 21. II (ಎ) | 46. ಸಾ.ಅ. | 71. ಪ.ಪಂ. | 96. ಸಾ.ಅ. |
| 22. ಸಾ.ಅ. | 47. III (ಎ) | 72. ಸಾ.ಅ. | 97. II (ಎ) |
| 23. ಪ.ಜಾ. | 48. ಸಾ.ಅ. | 73. III (ಎ) | 98. ಸಾ.ಅ. |
| 24. ಸಾ.ಅ. | 49. ಪ.ಜಾ. | 74. ಸಾ.ಅ. | 99. III (ಬಿ) |
| 25. II (ಎ) | 50. ಸಾ.ಅ. | 75. ಪ.ಜಾ. | 100. ಸಾ.ಅ. |

7